# ಕರ್ನಾಟಕ ವಿಕಾಸ

KARNATAKA VIKAS

ಮೇ May 2013




## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ



ಸ್ವಾಭಿಮಾನಿ ಶ್ರಮದ ದುಡಿತಕ್ಕೆ ಯೋಜನೆಯ ಸಮೃದ್ಧ ಕೊಡುಗೆ



ದಾವಣಗೆರೆ ತಾಲ್ಲೂಕಿನ
ಬೆಳವನೂರು ಗ್ರಾಮ
ಪಂಚಾಯತಿಯ
ತುರ್ಚಘಟ್ಟ ಗ್ರಾಮದ
ಚೆಕ್ ಡ್ಯಾಂ ನಿರ್ಮಾಣ

ಹಾಸನ ಜಿಲ್ಲೆ ಆಲೂರು
ತಾಲ್ಲೂಕಿನ ಹೊಂಚೂರು ಗ್ರಾಮ
ಪಂಚಾಯತಿಯ ರಸ್ತೆ
ಹಾಗೂ ಚರಂಡಿ ನಿರ್ಮಾಣ



# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಮೇ May 2013

ಸಂಪುಟ : 54
Volume : 54
ಸಂಚಿಕೆ : 06
Issue : 06


## ಈ ಸಂಚಿಕೆಯೊಳಗೆ


| | | |
|---|---|---|
| 3 | ಸಚಿವಾಲಯದಿಂದ ಸಂದೇಶ | – ಡಾ. ಇ.ವಿ. ರಮಣ ರೆಡ್ಡಿ |
| 5 | ಲೇಖನ | – ಟಿ.ಎನ್. ಕೃಷ್ಣಮೂರ್ತಿ |
| | | – ಚಂದ್ರಶೇಖರ್ ಎಂ. ಮಸಗುಪ್ಪಿ |
| | | – ಎಂ. ಗೋವಿಂದನ್ |
| | | – ಸಿ. ಎನ್. ಪದ್ಮಶ್ರೀ |
| 25 | ಚಿಂತನೆ | – ಪ್ರೊ. ಎ.ಎಚ್. ಮಾಸಾಪತಿ |
| 29 | ಯಶೋಗಾಥೆಗಳು | – ಉಮೇಶ್ ಹುಲಿಕುಂಟೆ |
| | | – ಕೆ. ಸುರೇಶ್ |
| | | – ಕೆ. ಜಿ ನಾಗರಾಜ್ |
| 39 | ಪಂಚತಂತ್ರ ವರದಿ | |
| 40 | ಸಕಾಲ ವರದಿ | |
| 41 | ಸುತ್ತೋಲೆಗಳು | |






ಪ್ರಕಾಶಕರು
**ಪಿ.ಕುಮಾರ್**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಭೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿಗಳು

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ|| ಎಂ.ಎಸ್.ಮಂಜುನಾಥ**
**ನಾಗರಾಜ್ ಬಿ ವಾಗಾ**

**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ
ವಿಳಾಸಕ್ಕೆ ತಲುಪಿಸಬಹುದು



**ಕಛೇರಿ ವಿಳಾಸ**
ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080–22353857
www.rdpr.kar.nic.in
email : kvrdpr@gmail.com



**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು
ಅನುಷ್ಠಾನಕ್ಕೆ ತರಬೇಕು

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ

ಪತ್ರಿಕೆಯ ಕುರಿತು
ನಿಮ್ಮ ನುಡಿ




ಏಪ್ರಿಲ್ 2013ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಸಂಪಾದಕೀಯದಲ್ಲಿ ಕುಡಿಯುವ ನೀರಿಗೆ ಹೆಚ್ಚು ಮಹತ್ವ ನೀಡಿರುವುದು ಹಾಗೂ ನೀರಿಗೆ ಸಂಬಂಧಪಟ್ಟ ಲೇಖನಗಳನ್ನು ಪ್ರಕಟಿಸಿದ ಸಂಪಾದಕರ ಬಳಗಕ್ಕೆ ನನ್ನ ಅನಂತ ವಂದನೆಗಳು. ದೇಶದಲ್ಲಿಯೇ ಅತ್ಯಂತ ಬರದಿಂದ ತತ್ತರಿಸಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಈ ಸಂದರ್ಭದಲ್ಲಿ ನೀರನ್ನು ಮಿತವಾಗಿ ಬಳಸಿ, ಉಳಿಸುವ ಕುರಿತು ಹೆಚ್ಚು ಮಾಹಿತಿಯನ್ನು ಅರ್ಥಪೂರ್ಣವಾಗಿ ಪ್ರಕಟಿಸಿರುವುದು ಸಂದರ್ಭೋಚಿತವಾಗಿದೆ.

**– ದ್ವಾರಕಿ. ಎ.ಆರ್,**
ನಂ.11/48, 6ನೇ ಮುಖ್ಯರಸ್ತೆ, ಶ್ರೀರಾಮ ಬಡಾವಣೆ,ಜ್ಞಾನಜ್ಯೋತಿ ನಗರ, ಬೆಂಗಳೂರು–560056

ವಿಶ್ವ ಜಲ ದಿನದ ಮುಖಪುಟದೊಂದಿಗೆ ಮನೆಗೆ ಬಂದ ಏಪ್ರಿಲ್ 2013ರ ಕರ್ನಾಟಕ ವಿಕಾಸ ಪತ್ರಿಕೆಯು ಮನ ಸೆಳೆಯಿತು. ಅದರಲ್ಲೂ ಇಲಾಖೆಯು ಗ್ರಾಮೀಣ ಜನತೆಗೆ ಕುಡಿಯುವ ನೀರಿನ ಪೂರೈಕೆ, ನಮ್ಮ ಆದ್ಯತೆ ಎಂದಿರುವುದು ನಿಜಕ್ಕೂ ಹೆಮ್ಮೆಯೆನಿಸಿತು. ಈ ನಿಟ್ಟಿನಲ್ಲಿ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ಹಲವಾರು ನೀರು ಸಂಬಂಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಜನ ಜಾನುವಾರುಗಳನ್ನು ರಕ್ಷಿಸಲು ಹಾಗೂ ಇದಕ್ಕಾಗಿ ಸರ್ಕಾರವು 100 ಕೋಟಿ ಅನುದಾನವನ್ನು ಬಿಡುಗಡೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ.

**– ನವೀನ್‌ಗೌಡ**
ಕೋಟೆ ರಸ್ತೆ, ಚನ್ನಪಟ್ಟಣ, ರಾಮನಗರ ಜಿಲ್ಲೆ.

ಏಪ್ರಿಲ್ ತಿಂಗಳಿನ ಡಾ|| ಪಾಟೀಲ್ ಪುಟ್ಟಪ್ಪನವರ "ನೋವು ತಿಂದವರಿಗೆ ಜೀವನ ಗೊತ್ತಾಗುತ್ತದೆ" ಎಂ ಲೇಖನವು ಮನಮುಟ್ಟುವಂತಿದೆ. ಇದರೊಂದಿಗೆ ಸರ್ಕಾರದ ಹಲವಾರು ಯೋಜನೆಗಳು, ಮಾಹಿತಿ, ಪ್ರಚಲಿತ ವಿಧ್ಯಾಮಾನಗಳ ಸಚಿತ್ರವರದಿ ಲೇಖನ, ಇನ್ನಿತರ ಉಪಯುಕ್ತ ಸರ್ಕಾರದ ಮಾಹಿತಿಗಳಿಂದ ಪ್ರತಿ ತಿಂಗಳು ಮೂಡಿ ಬರುತ್ತಿರುವ ಕರ್ನಾಟಕ ವಿಕಾಸ ಚನ್ನಾಗಿ ಪ್ರಕಟಣೆಗೊಳ್ಳುತ್ತಿದೆ. ಹೊಸ ಹೊಸ ಓದುಗ ಬರಹಗಾರರಿಗೂ ಮುಕ್ತವಾದ ಅವಕಾಶ ನೀಡಿರಿ. ಪ್ರತಿಯೊಂದು ರಂಗದ ಗುಣಾತ್ಮಕ ಲೇಖನಗಳು ನಿರಂತರವಾಗಿ ಮೂಡಿಬರಲಿ ಎಂದು ಆಶಯ ಧನ್ಯವಾದಗಳೊಂದಿಗೆ

**– ಶ್ರೀ ಚಿದಂಬರ ಪಿ. ನಂಬರಗಿ,**
ಅಧ್ಯಕ್ಷರು, ಶ್ರೀ ಶಿವಚಿದಂಬರ ಶಿಕ್ಷಣ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ) ಶಿರೋಳ,
ತಾಲ್ಲೂಕು: ನರಗುಂದ, ಜಿಲ್ಲೆ ಗದಗ

ಕರ್ನಾಟಕ ವಿಕಾಸ ಏಪ್ರಿಲ್ 2013ರ ಸಂಚಿಕೆಯು ಸುಂದರವಾದ ಮುಖಪುಟದೊಂದಿಗೆ ಮುದ್ರಣಗೊಂಡಿದೆ. ಸಂಚಿಕೆಯಲ್ಲಿ ಸಂಪಾದಕೀಯವೂ ಸೇರಿದಂತೆ ಉಳಿದೆಲ್ಲ ಲೇಖನಗಳು ತುಂಬಾ ಮಾಹಿತಿಯನ್ನು ಗೊತ್ತು ತಂದವು. ಸದಾಕಾಲ ಸಂಪತ್ಭರಿತವಾದ ಹಾಗೂ ಸಂಪನ್ಮೂಲ ಮಾಹಿತಿಯನ್ನು ಸಕಾಲಕ್ಕೆ ತಪ್ಪದೇ ಸಮಸ್ತ ನಾಗರಿಕರಿಗೆ ಸಮರ್ಪಿಸುವ ಪತ್ರಿಕೆಗೆ ಅನಂತ ಅನಂತ ಧನ್ಯವಾದಗಳು. ನಾಡನ್ನು ಪ್ರತಿನಿಧಿಸುವ ಪತ್ರಿಕೆಯು ಸದಾಕಾಲ ಇದೇ ರೀತಿಯಾಗಿ ಮಾಹಿತಿಯನ್ನು ಹೊತ್ತು ತರಲಿ ಎಂದು ಆಶಿಸುತ್ತೇನೆ.

**– ಕಿರಣಕುಮಾರ . ವೈ. ಅರಮನೆ**
ಧಾರವಾಡ

# ಸಚಿವಾಲಯದಿಂದ ಸಂದೇಶ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.



**ಡಾ. ಇ.ವಿ. ರಮಣ ರೆಡ್ಡಿ,** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಪ್ರಿಯ ಬಂಧುಗಳೇ,

## ಗ್ರಾಮೀಣ ಜನತೆಯ ಆರ್ಥಿಕ ಪ್ರಗತಿ, ಯೋಜನೆಯ ಪ್ರಮುಖ ಗುರಿ . . . .

ಗ್ರಾಮೀಣ ಜನರು ಉದ್ಯೋಗಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಿ, ಅಕುಶಲ ದೈಹಿಕ ಕೆಲಸ ಬಯಸುವ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ವರ್ಷದಲ್ಲಿ 100 ದಿನಗಳ ಉದ್ಯೋಗಾವಕಾಶವನ್ನು ಕಲ್ಪಿಸಿ ಸ್ಥಳೀಯವಾಗಿ ಆಸ್ತಿಗಳನ್ನು ಸೃಜಿಸುವ ಮೂಲಕ, ದೀರ್ಘಕಾಲದ ಜೀವನೋಪಾಯ ಮಾರ್ಗಗಳನ್ನು ಬಲಪಡಿಸುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು 2006-07ನೇ ಸಾಲಿನಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುತ್ತಿರುವುದು ತಮಗೆಲ್ಲಾ ತಿಳಿದ ವಿಷಯವೇ ಆಗಿದೆ.

ಆದರೆ ಯೋಜನೆಯನ್ನು ಯಶಸ್ವಿಗೊಳಿಸುವ ಸಲುವಾಗಿ ನಮ್ಮ ಅಧಿಕಾರಿ ಸಿಬ್ಬಂದಿಗಳು ಮತ್ತಷ್ಟು ವ್ಯವಸ್ಥಿತವಾಗಿ ಕ್ರಿಯಾಶೀಲತೆಯೊಂದಿಗೆ ಕಾರ್ಯನಿರ್ವಹಿಸಲು ಹಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

ಅಕುಶಲ ಕಾರ್ಮಿಕರಿಗೆ ಯೋಜನೆಯಡಿ ಕೂಲಿ ಪಾವತಿಗಾಗಿ ಅಧಿನಿಯಮದ ಪ್ರಕರಣ 6 (1) ರ ಪ್ರಕಾರ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದ ಕೂಲಿಯ ದರದಂತೆ ಕೂಲಿ ವೇತನವನ್ನು ಒಂದು ವಾರದ ಒಳಗೆ ಅಥವಾ ಗರಿಷ್ಠ 15 ದಿನಗಳಿಗೆ ಮೀರದ ಅವಧಿ ಒಳಗೆ ಪಾವತಿಸಬೇಕಾಗಿರುತ್ತದೆ. ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಕೂಲಿ ವೇತನ ನೀಡಬೇಕಾಗಿದೆ. ಕೂಲಿ ಪಾವತಿಯಲ್ಲಿ ಯಾವುದೇ ಲಿಂಗ ಭೇದ ಮಾಡಲು ಅವಕಾಶ ಇರುವುದಿಲ್ಲ.

ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿಸಿ ಅದರ ಕಾರ್ಯಾಚರಣೆಗೆ ಅಗತ್ಯ ನಿಯಮಗಳನ್ನು ರೂಪಿಸುವ ಸಲುವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಗೊಳಿಸುವ ಅನುದಾನಗಳನ್ನು ಸದರಿ ನಿಧಿಗೆ ಜಮೆ ಮಾಡಿಕೊಂಡು ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು. ಹಾಗೂ ಯೋಜನೆಯ ಅನುಷ್ಠಾನದಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಹಾಗೂ ಇತರೆ ತೊಡಕುಗಳನ್ನು ನಿವಾರಿಸುವ ಸಲುವಾಗಿ ಇತರೆ ಅಭಿವೃದ್ಧಿ ಇಲಾಖೆಗಳನ್ನು ಯೋಜನೆಯಡಿ ಅನುಷ್ಠಾನ ಸಂಸ್ಥೆಗಳನ್ನಾಗಿ ಘೋಷಿಸಲಾಗಿದೆ.

## ಯೋಜನೆಯಡಿ ಕೈಗೊಳ್ಳಲಾದ ವಿನೂತನ ಕಾರ್ಯಕ್ರಮಗಳು .......

1. ಇಎಫ್‌ಎಮ್‌ಎಸ್ ವ್ಯವಸ್ಥೆಯ ಮೂಲಕ ಕಾಮಗಾರಿಗಳ ಅನುಷ್ಠಾನದಲ್ಲಿ ಕೂಲಿ ಕಾರ್ಮಿಕರು ಸಂಪಾದಿಸಿದ ಕೂಲಿಯ ಹಣವನ್ನು ನೇರವಾಗಿ ಬ್ಯಾಂಕಿನ ಖಾತೆಯಿಂದ ಕಾರ್ಮಿಕರ ಉಳಿತಾಯ ಖಾತೆಗೆ ಜಮೆ ಮಾಡಿ ಸಕಾಲದಲ್ಲಿ ಪಾವತಿಸಲಾಗುತ್ತದೆ. ಈ ಕ್ರಮದಿಂದ ಕೂಲಿ ಪಾವತಿಯಲ್ಲಿ ಆಗುವ ವಿಳಂಬವನ್ನು ತಪ್ಪಿಸುವುದಲ್ಲದೆ ಮಧ್ಯಸ್ಥರ ಹಾವಳಿಯನ್ನು ಕೂಡ ತಡೆಯಲಾಗುತ್ತದೆ. ಮುಂದಿನ ದಿನಗಳಲ್ಲಿ ಸಾಮಗ್ರಿ ಹಣವನ್ನು ಸಹ SMS ಮೂಲಕ ಪಾವತಿಸಲು ಕ್ರಮವಹಿಸಲಾಗುವುದು.
2. ಯೋಜನೆಯ ಸೌಲಭ್ಯಗಳ ಮಾಹಿತಿ ಪಡೆಯುವ ಬಗ್ಗೆ ಮತ್ತು ಉದ್ಯೋಗದ ಬೇಡಿಕೆ ಹಾಗೂ ಕುಂದು ಕೊರತೆಗಳನ್ನು ಸಲ್ಲಿಸಲು ಅನುವಾಗುವಂತೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ದೂರವಾಣಿ ಮೂಲಕ ಪಡೆಯುವ ಸಲುವಾಗಿ ದೂರವಾಣಿ ಸಂಖ್ಯೆ: **1800 425 8666** ಯನ್ನು ಹೊಂದಿರುವ ಟೋಲ್–ಫ್ರೀ ಕಾಲ್‌ಸೆಂಟರ್‌ನ್ನು ದಿನಾಂಕ 25–02–2013 ರಿಂದ ಚಾಲನೆಗೊಳಿಸಲಾಗಿದೆ.
3. ಯೋಜನೆಯ ಪರಿಣಾಮಕಾರಿ ಅನುಷ್ಠಾನದ ದೃಷ್ಟಿಯಿಂದ ಖಾಲಿ ಹುದ್ದೆಗಳಿಗೆ KTPP ನಿಯಮಗಳ ಅನ್ವಯ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ.
4. ಯೋಜನೆಯ ಅನುಷ್ಠಾನದಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳ ಸಂಪೂರ್ಣ ಮಾಹಿತಿಯನ್ನು ವ್ಯವಸ್ಥಿತವಾಗಿ ಅಳವಡಿಸಲು ಉದ್ದೇಶಿಸಿ ತಂತ್ರಾಂಶವೊಂದನ್ನು ಅಭಿವೃದ್ಧಿ ಪಡಿಸಲ್ಲಿದ್ದು ಪ್ರಗತಿಯಲ್ಲಿರುತ್ತದೆ.
5. ಯೋಜನೆಯ ಕುರಿತು ಅರಿವು ಮೂಡಿಸುವ ಹಾಗೂ ಪ್ರಚಾರ ಪಡಿಸುವ ಉದ್ದೇಶಕ್ಕಾಗಿ ಕಲಾಜಾಥ ಕಾರ್ಯಕ್ರಮಗಳು, ಆಕಾಶವಾಣಿ, ದೂರದರ್ಶನ ಹಾಗೂ ದಿನಪತ್ರಿಕಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ.
6. ಯೋಜನೆಯನ್ನುಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ ಮಾರ್ಗಸೂಚಿಗಳನ್ವಯ ಕಾಯಕ ಬಂಧು(**MATES**) ಗಳನ್ನು ಆಯ್ಕೆಮಾಡಿ ನಿಯೋಜಿಸಿಕೊಳ್ಳಲು ಆದೇಶಿಸಲಾಗಿದೆ.
7. ಯೋಜನೆಯಡಿ ಸ್ವೀಕರಿಸಲಾಗುವ ದೂರುಗಳನ್ನು ಪರಿಗಣಿಸಿ ವಿಲೇಗೊಳಿಸಲು ಒಂಬಡ್ಸ್‌ಮನ್‌ಗಳನ್ನು ನೇಮಿಸಿಲು ಅವಕಾಶ ಮಾಡಿದ್ದು ಅದರನ್ವಯ ರಾಜ್ಯದಲ್ಲಿಯೂ 19 ಜಿಲ್ಲೆಗಳಲ್ಲಿ ಒಂಬಡ್ಸ್‌ಮನ್‌ಗಳನ್ನು ನೇಮಕ ಮಾಡಲಾಗಿದೆ. ಬಾಕಿ ಇರುವ 11 ಜಿಲ್ಲೆಗಳಿಗೆ ನೇಮಕಾತಿ ಮಾಡುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.
8. ಸಾಮಾಜಿಕ ಪರಿಶೋಧನೆಗೆ ಅನುವಾಗುವಂತೆ ನಿಯಮಗಳನ್ನು ರೂಪಿಸಿಲಾಗಿದ್ದು ವರ್ಷದಲ್ಲಿ 6 ತಿಂಗಳಿಗೊಮ್ಮೆ ಪ್ರತಿ ಗ್ರಾಮಪಂಚಾಯತಿಯ ಸಾಮಾಜಿಕ ಪರಿಶೋಧನೆ ಮಾಡುವುದನ್ನು ಕಡ್ಡಾಯಗೊಳಿಸಿದೆ. ಮುಂದುವರೆಸಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಒಂದು ಸಂಘ/ನಿರ್ದೇಶನಾಲಯವನ್ನು ಸ್ಥಾಪಿಸಿ ಆ ಮೂಲಕ ವಿಸ್ತೃತ ಸಾಮಾಜಿಕ ಪರಿಶೋಧನೆಗೆ ಕ್ರಮ ಕೈಗೊಳ್ಳಲಾಗಿದೆ.

ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು ಸಂಬಂಧಿಸಿದ ಹಲವಾರು ಮಾಹಿತಿಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಯೋಜನೆಯ ಧ್ಯೇಯೋದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ನಾವೆಲ್ಲಾ ಮತ್ತಷ್ಟು ಕಾರ್ಯಶೀಲರಾಗಿ ಕರ್ತವ್ಯ ನಿರ್ವಹಿಸೋಣವೆಂದು ನಾನು ಆಶಿಸುತ್ತೇನೆ.

(ಡಾ॥ ಇ.ವಿ.ರಮಣ ರೆಡ್ಡಿ)




# ಉದ್ಯೋಗ ಖಾತರಿ ಅಧಿನಿಯಮ–ಒಂದು ಹಿನ್ನೆಲೆ

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದ್ದು ಒಂದು ಯಶಸ್ವಿ ಯೋಜನೆಯಾಗಿ ಹೊರಹೊಮ್ಮಿದೆ.**

**ಯೋಜನೆ ಸಂಬಂಧಪಟ್ಟ ಅಧಿನಿಯಮದ ಹಿನ್ನೆಲೆಯು ಒಂದು ಕಿರುಚಿತ್ರಣವನ್ನು ಈ ಲೇಖನದಲ್ಲಿ ನೀಡಲಾಗಿದೆ.**

ದೇಶದಲ್ಲಿ ಬಡತನ ಹೋಗಲಾಡಿಸಲು ಮೊಟ್ಟ ಮೊದಲು ಈ ದೇಶದ ಕಡುಬಡವರು ಹಸಿವಿನ ನರಳುವಿಕೆಯಿಂದ ಮುಕ್ತರಾಗಬೇಕು ಆಗಲೇ ನಿಜವಾದ ಸ್ವಾತಂತ್ರ್ಯ ಬಂದಂತಾಗುವುದು ಎಂದು ಗಾಂಧೀಜಿಯವರು ಹೇಳಿದ ಮಾತಿದೆ. ಈ ಧ್ಯೇಯವನ್ನು ಸಾಧಿಸಬೇಕಾದರೆ, ನಿರುದ್ಯೋಗದ ಪ್ರಮಾಣವನ್ನು ಕಡಿಮೆ ಮಾಡಬೇಕು ಹಾಗೂ ದುಡಿಯಲು ಶಕ್ತಿ ಇರುವ ಜನರಿಗೆ ದುಡಿದು ಸಂಪಾದಿಸಲು ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಬಡತನಕ್ಕೆ ಹಲವಾರು ಕಾರಣಗಳಿದ್ದು ಅವುಗಳನ್ನು ವಿವಿಧ ಕೋನಗಳಲ್ಲಿ ಕಾಣಬಹುದಾಗಿರುತ್ತದೆ. ಸೋಮಾರಿತನ, ಕೆಟ್ಟ ಅಭ್ಯಾಸಗಳು, ಹೆಚ್ಚು ಮಕ್ಕಳನ್ನು ಹೊಂದಿರುವುದು, ಹಣ ಇಲ್ಲದೇ ಇರುವುದು, ಉಳಿತಾಯ ಮಾಡದೇ ಇರುವುದು, ಭವಿಷ್ಯದ ಕುರಿತು ಚಿಂತನೆ ಮಾಡದೇ ಇರುವುದು, ಸಾಕಷ್ಟು ಪೌಷ್ಠಿಕ ಆಹಾರ ಸಿಗದೆ ಆರೋಗ್ಯ ಸ್ಥಿತಿ ಕಡಿಮೆ ಇರುವುದು ಮಾನಸಿಕ ಸ್ಥಿತಿ ಸರಿಯಿಲ್ಲದೇ ಇರುವುದು, ಅನಕ್ಷರತೆ ಇರುವುದು, ದುಡಿಯುವ ಕೈಗಳಿಗೆ ಕೆಲಸ ಇಲ್ಲದೇ ಇರುವುದು, ಕಡಿಮೆ ವೇತನ ನೀಡುವುದು ಮತ್ತು ಜನರ ನಡುವೆ ಸಂಪರ್ಕದ ಕೊರತೆ ಇರುವುದು ಅಲ್ಲದೇ ಸಾಮಾಜಿಕ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಅಸಮಾನತೆ, ಸಂಪತ್ತು, ಸೌಲಭ್ಯಗಳು ಮತ್ತು ಅವಕಾಶಗಳ ಅಸಮಾನಹಂಚಿಕೆಗಳೂ ಕೂಡ ಬಡತನಕ್ಕೆ ಕಾರಣಗಳಾಗಿರುತ್ತವೆ.

ಒಟ್ಟಾರೆ ಮಾನವ ಅಭಿವೃದ್ಧಿ ಆಗಬೇಕಾದರೆ ಜನರ ಆಯ್ಕೆಗಳನ್ನು ವಿಶಾಲಗೊಳಿಸಬೇಕಾಗಿದೆ. ಸಮಾಜದ ಅಭಿವೃದ್ಧಿಯ ದೃಷ್ಟಿಯಿಂದ ಜನರು ಆರ್ಥಿಕವಾಗಿ ಸದೃಢರಾಗಬೇಕು. ಬಡತನವನ್ನು ಸಂಪೂರ್ಣವಾಗಿ ನಿವಾರಣೆ ಮಾಡಬೇಕಾದರೆ, ಮೊದಲಿಗೆ ನಿರುದ್ಯೋಗ ನಿವಾರಣೆ ಆಗಬೇಕು. ದುಡಿದು ಗಳಿಸಲೇ ಬೇಕಾದ

ವಯೋಮಿತಿಯ ಜನರಿಗೆ ದುಡಿದು ಸಂಪಾದಿಸಲು ಸಾಕಷ್ಟು ಅವಕಾಶ ಕಲ್ಪಿಸುವುದು ಇಂದಿನ ಅವಶ್ಯಕತೆಯಾಗಿರುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ವಾತಂತ್ರ್ಯದ ನಂತರದಲ್ಲಿ ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತನ್ನು ನೀಡಿರುತ್ತವೆ. ಬಡತನ ಹೋಗಲಾಡಿಸಲು, ಗ್ರಾಮೀಣ ಪ್ರದೇಶದ ನಿರುದ್ಯೋಗ ನಿವಾರಿಸಲು ಹಾಗೂ ಆರ್ಥಿಕ ಅಸಮಾನತೆ ಸರಿದೂಗಿಸುವ ದೃಷ್ಟಿಯಿಂದ ಹಲವಾರು ಜನಪರ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬಂದಿರುವುದನ್ನು ಇಲ್ಲಿ ಅವಲೋಕಿಸಬಹುದು.

1961ನೇ ಸಾಲಿನಲ್ಲಿ ರಾಷ್ಟ್ರೀಯ ಮಾನವ ಶಕ್ತಿ ಕಾರ್ಯಕ್ರಮ (RMP) ದೇಶದಲ್ಲಿ ಜಾರಿಗೆ ಬಂದಿತು. ಇದರಲ್ಲಿ ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಉದ್ಯೋಗ ಅವಶ್ಯಕತೆ ಇರುವ ಗ್ರಾಮೀಣ ಕೂಲಿಕಾರರಿಗೆ ವರ್ಷದಲ್ಲಿ ನೂರು ದಿನಗಳ ದುಡಿಮೆ ಮಾಡಲು ಅವಕಾಶ ಒದಗಿಸಲಾಗಿತ್ತು. 1971 ರಲ್ಲಿ ಗ್ರಾಮೀಣ ಉದ್ಯೋಗಕ್ಕಾಗಿ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಇದರ ಮೂಲಕ ರಾಷ್ಟ್ರೀಯ ಮಾನವ ಶಕ್ತಿ ಕಾರ್ಯಕ್ರಮದ ಅನುಷ್ಠಾನದ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. 1976ನೇ ಸಾಲಿನಲ್ಲಿ 20 ಅಂಶಗಳ ಕಾರ್ಯಕ್ರಮಗಳನ್ನು ಸಹ ಜಾರಿಗೆ ತರಲಾಯಿತು.

1977–1989 ರ ಅವಧಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮವು (NREP) ಜಾರಿಗೆ ಬಂದಿತು. ಇದರ ಉದ್ದೇಶ ಹೆಚ್ಚುವರಿ ಆಹಾರ ಧಾನ್ಯ ಬಳಸಿ ಗ್ರಾಮೀಣ ಮೂಲಭೂತ ಸೌಕರ್ಯ ಸೃಷ್ಟಿಸುವುದು ಹಾಗೂ ದುಡಿಯುವ ಕೈಗಳಿಗೆ ಕೆಲಸ ಒದಗಿಸುವುದಾಗಿತ್ತು. 1983–89 ರ ಅವಧಿಯಲ್ಲಿ ಇದರ ಜೊತೆಗೆ ಗ್ರಾಮೀಣ ಭೂ ರಹಿತ ಉದ್ಯೋಗ ಖಾತರಿ ಕಾರ್ಯಕ್ರಮ (RLEGP-Rural Landless Employment Guarantee Programme) ಜಾರಿಗೆ ತರಲಾಯಿತು. ಭೂ ರಹಿತ ಕೃಷಿ ಕಾರ್ಮಿಕರಿಗೆ ಉದ್ಯೋಗ ದೊರಕಿಸುವುದು ಈ ಕಾರ್ಯಕ್ರಮದ ಗುರಿಯಾಗಿತ್ತು. 1989ನೇ ಇಸವಿಯಲ್ಲಿ NREP ಮತ್ತು RLEGP ಎಂಬ ಎರಡು ಯೋಜನೆಗಳನ್ನು ವಿಲೀನಗೊಳಿಸಿ, ಜವಹಾರ್ ರೋಜ್‌ಗಾರ್ ಯೋಜನೆ ಯನ್ನು ಜಾರಿಗೊಳಿಸಲಾಯಿತು. ಸದರಿ ಯೋಜನೆ ವಿಶೇಷತೆ ಏನೆಂದರೆ, ಗ್ರಾಮ ಪಂಚಾಯಿತಿಗಳಿಗೆ ನೇರವಾಗಿ ಅನುದಾನ ಬಿಡುಗಡೆ ಮಾಡಿ ಅನುಷ್ಠಾನದ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸುವುದಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸುವುದು, ಗ್ರಾಮೀಣ ಬಡಜನರಿಗೆ ಅನುಕೂಲವಾಗುವ ಆಸ್ಥಿಗಳ ನಿರ್ಮಾಣ ಮಾಡುವುದು, ಆರ್ಥಿಕ ಚಟುವಟಿಕೆಗಳಿಗೆ ಪ್ರೇರಣೆ ನೀಡುವುದಾಗಿತ್ತು. 1993–94ರ ಅವಧಿಯಲ್ಲಿ ಉದ್ಯೋಗ ಭರವಸೆ ಯೋಜನೆಯನ್ನು ಜಾರಿಗೆ ತರಲಾಯಿತು. ಇದನ್ನು ಕೇಂದ್ರ ಸರ್ಕಾರವು ಕೇವಲ ನಿರ್ಧಿಷ್ಟಪಡಿಸಿದ ಹಿಂದುಳಿದ ತಾಲ್ಲೂಕುಗಳಲ್ಲಿ ಮಾತ್ರ ಅನುಷ್ಠಾನ ಗೊಳಿಸಲಾಗಿತ್ತು. ನಂತರ ರಾಜ್ಯ ಸರ್ಕಾರವು ಉದ್ಯೋಗ ಭರವಸೆ ಯೋಜನೇತರ ಪ್ರದೇಶಗಳಿಗೆ/ ತಾಲ್ಲೂಕುಗಳಿಗೆ ತನ್ನ ಸ್ವಂತ ಸಂಪನ್ಮೂಲಗಳಿಂದ ಅನುಷ್ಠಾನಗೊಳಿಸಲು ನೆಮ್ಮದಿ ಎಂಬ ಯೋಜನೆಯನ್ನು ಜಾರಿಗೊಳಿಸಿತ್ತು.

ಕೇಂದ್ರ ಸರ್ಕಾರವು ಮತ್ತೊಮ್ಮೆ ಈ ಯೋಜನೆಗಳ ಅನುಷ್ಠಾನವನ್ನು ಅವಲೋಕಿಸಿ, 1999 ರಿಂದ 2002 ರವರೆಗೆ JGSY-ಜವಹಾರ್ ಗ್ರಾಮ್ ಸಮೃದ್ಧಿ ಯೋಜನೆ ಮತ್ತು EAS–ಉದ್ಯೋಗ ಭರವಸೆ ಯೋಜನೆಗಳನ್ನು ಕೇಂದ್ರ ವಲಯದ ಯೋಜನೆ ಗಳನ್ನಾಗಿ ಪರಿಗಣಿಸಿ ಜಾರಿಗೊಳಿಸಿತು. ಸದರಿ ಯೋಜನೆಗಳ ಉದ್ದೇಶಗಳು, ಉದ್ಯೋಗ ಅವಕಾಶ ಗಳನ್ನು ಸೃಜಿಸುವುದು, ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆ ಮಾಡುವುದು, ಬೇಡಿಕೆ ಆಧಾರಿತ ಮೂಲಭೂತ ಸೌಕರ್ಯಗಳ ನಿರ್ಮಾಣ ಮಾಡುವುದು ಆಗಿತ್ತು.

2002ನೇ ಸಾಲಿನಲ್ಲಿ ಸಂಪೂರ್ಣ ಗ್ರಾಮೀಣ ರೋಜ್ ಗಾರ್ ಯೋಜನೆಯನ್ನು ಎರಡು

ವಾಹಿನಿಗಳಲ್ಲಿ ಸಂಪೂರ್ಣವಾಗಿ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಮಾರ್ಗ ಸೂಚಿಗಳನ್ನು ಹೊರಡಿಸಲಾಯಿತು. ಮೊದಲನೆಯ ವಾಹಿನಿಯನ್ನು SGRY-I Stream [SGRY (EAS)] ಎಂದು ಮತ್ತು ಎರಡನೇ ವಾಹಿನಿಯನ್ನು SGRY-II Stream [SGRY (JGSY)] ಎಂಬ ಹೆಸರಿನಲ್ಲಿ ಜಾರಿಗೊಳಿಸಲಾಗಿತ್ತು. ಸದರಿ ಯೋಜನೆಗಳಡಿ ಗ್ರಾಮೀಣ ಪ್ರದೇಶದ ಬಡ ಜನರಿಗೆ ಹೆಚ್ಚು ಉದ್ಯೋಗ ಅವಕಾಶಗಳನ್ನು ಸೃಷ್ಠಿಸುವುದು, ಕೂಲಿ ರೂಪದಲ್ಲಿ ಆಹಾರ ಧಾನ್ಯವನ್ನು ನೀಡುವುದು, ಹೆಚ್ಚು ಬಾಳಿಕೆ ಬರುವ ಸಮುದಾಯ ಆಸ್ತಿಗಳ ನಿರ್ಮಾಣ ಮಾಡುವುದು ಗುರಿಯಾಗಿತ್ತು. ಸಾಮಾಜಿಕ, ಆರ್ಥಿಕ ಮತ್ತು ಇತರೆ ಮೂಲ ಸೌಕರ್ಯಗಳನ್ನು ವೃದ್ಧಿಸುವುದು, ಮಹಿಳೆಯರು, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ದವರಿಗೆ, ಬಾಲ ಕಾರ್ಮಿಕತೆಯಿಂದ ಮುಕ್ತಿ ಹೊಂದಿದ ಮಕ್ಕಳ ಕುಟುಂಬಗಳ ಸದಸ್ಯರಿಗೆ ಈ ಯೋಜನೆಗಳಡಿ ಉದ್ಯೋಗ ಅವಕಾಶವನ್ನು ಒದಗಿಸುವ ಗುರಿಯನ್ನು ಹೊಂದಲಾಗಿತ್ತು.

2004–05ನೇ ಸಾಲಿನಲ್ಲಿ ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆಯನ್ನು (NFFWP) ಜಾರಿಗೆ ತರಲಾಯಿತು. ಈ ಯೋಜನೆಯನ್ನು ಯೋಜನಾ ಆಯೋಗದಿಂದ ಗುರುತಿಸಲ್ಪಟ್ಟ ದೇಶದ 150 ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸುವ ಉದ್ದೇಶ ಹೊಂದಲಾಗಿತ್ತು. ಈ ಯೋಜನೆಗೆ ಸಂಪೂರ್ಣ ಅನುದಾನವನ್ನು ಕೇಂದ್ರ ಸರ್ಕಾರದಿಂದ ಒದಗಿಸಲಾಗುತ್ತಿತ್ತು. ಕೂಲಿಯ ಒಂದು ಭಾಗದಷ್ಟನ್ನು ಆಹಾರ ಧಾನ್ಯಗಳ ರೂಪದಲ್ಲಿ ಮತ್ತು ಉಳಿದ ಭಾಗವನ್ನು ನಗದು ರೂಪದಲ್ಲಿ ಪಾವತಿಸಲಾಗುತ್ತಿತ್ತು. ರಾಜ್ಯದಲ್ಲಿ ಬೀದರ್, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಅತೀ ಹಿಂದುಳಿದ ಜಿಲ್ಲೆಗಳೆಂದು ಪರಿಗಣಿಸಿ ಆಯ್ಕೆ ಮಾಡಿ ಯೋಜನೆಯನ್ನು ಆ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗಿತ್ತು.

ಬಡತನ ನಿರ್ಮೂಲನಾ ಕಾರ್ಯಕ್ರಮಗಳಲ್ಲಿ ಉದ್ಯೋಗ ನಿವಾರಣಾ ಕಾರ್ಯಕ್ರಮವು ಒಳ ಗೊಂಡಿದ್ದು, ಸದರಿ ಕಾರ್ಯಕ್ರಮಗಳನ್ನು ದೇಶಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದ್ದು, ಅವುಗಳ ಬಗ್ಗೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಅಧ್ಯಯನ ಮಾಡಿಸಿ, ಅದರಲ್ಲಿನ ವೈಫಲ್ಯಗಳನ್ನು ಗುರುತಿಸಿ ಅವುಗಳು ಮರುಕಳಿಸ ಬಾರದೆಂಬ ದೃಷ್ಟಿಯಿಂದ ಮತ್ತು ಹಿಂದಿನ ಯೋಜನೆಗಳ ಅನುಷ್ಠಾನಗಳ ಅನುಭವಗಳನ್ನು ಗಣನೆಗೆ ತೆಗೆದುಕೊಂಡು ಇದೇ ಮೊದಲ ಬಾರಿಗೆ ಉದ್ಯೋಗ ಕಾರ್ಯಕ್ರಮವಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ನ್ನು 2006–07 ನೇ ಸಾಲಿನ ಆರ್ಥಿಕ ವರ್ಷದಿಂದ ಜಾರಿಗೆ ತಂದಿರುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸುವ ಮೂಲಕ ಕೂಲಿ ಉದ್ಯೋಗ ಬಯಸುವ ಅಕುಶಲ ಗ್ರಾಮೀಣ ಜನರಿಗೆ ಕನಿಷ್ಠ ನೂರು ದಿನಗಳ ಕೂಲಿ ಉದ್ಯೋಗ ಒದಗಿಸುವ ಬರವಸೆ ನೀಡುವುದೊಂದಿಗೆ ಈ ಅಧಿನಿಯಮಕ್ಕೆ ಒಂದು ಕಾಯಿದೆ ಸ್ವರೂಪ ನೀಡಿ ಉದ್ಯೋಗದ ಹಕ್ಕನ್ನು ನೀಡಲಾಗಿದೆ. ಪ್ರಾದೇಶಿಕ ಭಿನ್ನತೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ನಿರ್ದೇಶನದಂತೆ ಆಯಾಯ ರಾಜ್ಯಗಳೇ ಯೋಜನೆಯ ಅನುಷ್ಠಾನಕ್ಕೆ ಪೂರಕ ಕಾಯಿದೆ ನಿಯಮಗಳನ್ನು ರಚಿಸಲು ಅನುಮಾಡಿದೆ. ಅದರಂತೆ ಈ ಯೋಜನೆಯನ್ನು ರಾಷ್ಟ್ರಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ನ್ನು ಜಾರಿಗೆ ತಂದಿರುವುದನ್ನು ಅನುಸರಿಸಿ ಕರ್ನಾಟಕ ರಾಜ್ಯದಲ್ಲಿಯೂ ಸಹ ಸದರಿ ಯೋಜನೆ ಯನ್ನು 2006–07ನೇ ಸಾಲಿನಿಂದ ಪ್ರಾರಂಭಿಸಿ ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನಗೊಳಿಸಲಾಗುತ್ತಿದೆ.




# ಕರೆ ಉಚಿತ ಉದ್ಯೋಗ ಖಚಿತ ಯೋಜನೆಯ ಬಗ್ಗೆ

## ಉಚಿತ ಸಹಾಯವಾಣಿ - 1800 425 8666

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸುತ್ತಾ ಹೋದಂತೆಲ್ಲಾ ಪ್ರತಿ ಆರ್ಥಿಕ ವರ್ಷದಲ್ಲೂ ಯೋಜನೆಯು ವಿವಿಧ ಮಜಲುಗಳನ್ನು ಕಾಣುತ್ತಾ ಸಾಗಿದೆ. ಗ್ರಾಮೀಣ ಪ್ರದೇಶದ ಜನರಲ್ಲಿ ಯೋಜನೆಯ ಕುರಿತು ಅರಿವು, ಒದಗಿಸಲಾಗುವ ಸೌಲಭ್ಯವನ್ನು ಪಡೆಯುವಾಗ ಕೈಗೊಳ್ಳಬೇಕಾದ ಪ್ರಕ್ರಿಯೆಯ ವಿವರ, ಯೋಜನೆಯ ಅನುಷ್ಠಾನದ ಕುರಿತು ದೂರುಗಳನ್ನು ಸಲ್ಲಿಸುವುದು, ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆಯನ್ನು ಕಾಪಾಡುವುದು ಮುಂತಾದವುಗಳ ಕುರಿತು ಮಾಹಿತಿಯ ಒದಗಿಸುವುದು ಒಂದು ಸವಾಲಾಗಿ ಪರಿಣಮಿಸತೊಡಗಿತು.

ಈ ಹಿನ್ನೆಲೆಯಲ್ಲಿ ಈ ಎಲ್ಲಾ ಕೊರತೆ / ಸಮಸ್ಯೆಗಳಿಗೆ ಒಂದೇ ವೇದಿಕೆಯಡಿ ಪರಿಹಾರ ಒದಗಿಸುವ ಚಿಂತನೆಗೆ ಚಾಲನೆ ದೊರೆಯಿತು. ಅದರ ರೂಪುರೇಷೆಗಳು ಸಿದ್ದಗೊಂಡ ನಂತರ ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು –2000 ನ್ನು ಪಾಲಿಸಿ ಕಾಲ್‌ಸೆಂಟರ್ ಸ್ಥಾಪನೆ ಸಂಬಂಧ ಅರ್ಹ ಬಿಡ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿ, ನಿಯಮಾನುಸಾರ ಟೆಂಡರ್‌ನ್ನು ಅಂತಿಮಗೊಳಿಸಿ ಅರ್ಹ ಬಿಡ್‌ದಾರರಿಗೆ ಟೆಂಡರ್‌ನ್ನು ವಹಿಸಲಾಯಿತು.

"ಕರೆ ಉಚಿತ ಉದ್ಯೋಗ ಖಚಿತ" ಎಂಬ ಧ್ಯೇಯವಾಕ್ಯದೊಂದಿಗೆ ದಿನಾಂಕ 25.02.2013 ರಂದು ಉಚಿತ ಸಹಾಯವಾಣಿ ಸಂ. 1800 425 8666 ನ್ನು ಅಧಿಕೃತವಾಗಿ ಪ್ರಾರಂಭಿಸಲಾಯಿತು. ಸಾರ್ವಜನಿಕರು ಈ ಉಚಿತ ಸಹಾಯವಾಣಿಗೆ ಕರೆ ಮಾಡಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಇದಲ್ಲದೇ

**ಯಾವುದೇ ಕಾರ್ಯಕ್ರಮ ಯಶಸ್ವಿಯಾಗಲು ಮಾಹಿತಿ ಮತ್ತು ಸಂವಹನ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ.**

**ಉದ್ಯೋಗ ಖಾತರಿ ಯೋಜನೆ ಬಗ್ಗೆ ಸಮಸ್ತ ಮಾಹಿತಿ ನೀಡಲು ಉಚಿತ ಸಹಾಯವಾಣಿಯನ್ನು ಇತ್ತೀಚೆಗಷ್ಟೇ ಇಲಾಖೆಯು ಪ್ರಾರಂಭಿಸಿದೆ. ಇದರ ಸದುಪಯೋಗವಾಗಲಿ.**

ಪ್ರಮುಖವಾದ ಮೂರು ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ.

### 1) ಉದ್ಯೋಗ ಚೀಟಿ: (15 ದಿನಗಳ ಒಳಗಾಗಿ)

ಗ್ರಾಮೀಣ ಪ್ರದೇಶದ ಕುಟುಂಬವು ನೋಂದಣಿಗಾಗಿ ಅರ್ಜಿ ಸಲ್ಲಿಸುವುದರೊಂದಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ. ಆದುದರಿಂದ ಈ ಪ್ರಕ್ರಿಯೆಗೆ ಪ್ರಾಮುಖ್ಯತೆಯನ್ನು ನೀಡುತ್ತಾ, ಸಾರ್ವಜನಿಕರು ಸಹಾಯವಾಣಿಗೆ ಕರೆ ಮಾಡಿ ಕುಟುಂಬದ ಮುಖ್ಯಸ್ಥರ ಮತ್ತು ಸದಸ್ಯರ ವಿವರಗಳನ್ನು ಒದಗಿಸಿಸುವುದರ ಮುಖಾಂತರ ಉದ್ಯೋಗ ಚೀಟಿಗೆ ಮನವಿ ಸಲ್ಲಿಸಬಹುದಾಗಿರುತ್ತದೆ. ಈ ರೀತಿ ಸಲ್ಲಿಕೆಯಾದ ಮನವಿಗಳನ್ನು ಸಮುಚಿತ ಮಾರ್ಗದ ಮುಖಾಂತರ ಸಂಬಂಧಪಟ್ಟ ತಾಲ್ಲೂಕು/ಗ್ರಾಮ ಪಂಚಾಯಿತಿಗೆ ಕಳುಹಿಸಿ, ಅರ್ಜಿಯು ಅರ್ಹವಾಗಿದ್ದಲ್ಲಿ ಉದ್ಯೋಗ ಚೀಟಿಯನ್ನು ಒದಗಿಸಲಾಗುವುದು.

### 2) ಉದ್ಯೋಗ ಬೇಡಿಕೆ:

ಅಚಿಶಲ ಕೂಲಿಗಾಗಿ ಬೇಡಿಕೆಯನ್ನು ಸಲ್ಲಿಸ ಬಯಸುವ, ಉದ್ಯೋಗ ಚೀಟಿಯನ್ನು ಹೊಂದಿರುವ ಗ್ರಾಮೀಣ ಪ್ರದೇಶದ ಕುಟುಂಬದ ಸದಸ್ಯರು ಸಹಾಯವಾಣಿಗೆ ಕರೆ ಮಾಡಿ ಕುಟುಂಬದ ಮಾಹಿತಿ, ಉದ್ಯೋಗ ಚೀಟಿ ಸಂಖ್ಯೆ, ಉದ್ಯೋಗ ಕೋರುವ ಅವಧಿ ಮುಂತಾದ ವಿವರಗಳನ್ನು ಸಲ್ಲಿಸುವ ಮುಖಾಂತರ ಅಕುಶಲ ಕೂಲಿಗಾಗಿ ಬೇಡಿಕೆಯನ್ನು ಸಲ್ಲಿಸ ಬಹುದಾಗಿರುತ್ತದೆ. ಈ ರೀತಿ ಸಲ್ಲಿಕೆಯಾದ ಮನವಿಗಳನ್ನು ಸಮುಚಿತ ಮಾರ್ಗದ ಮುಖಾಂತರ ಸಂಬಂಧಪಟ್ಟ ತಾಲ್ಲೂಕು/ಗ್ರಾಮ ಪಂಚಾಯಿತಿಗೆ ಕಳುಹಿಸಿ, ಮನವಿಯನ್ನು ಪರಿಶೀಲಿಸಿ, ಮನವಿ ಸಲ್ಲಿಸಿದ 15 ದಿನದೊಳಗಾಗಿ ಸದರಿ ಉದ್ಯೋಗ ಚೀಟಿ ಹೊಂದಿದವರು ಈಗಾಗಲೇ 100 ದಿನಗಳ ಉದ್ಯೋಗ ಸೌಲಭ್ಯವನ್ನು ಪಡೆದುಕೊಂಡಿಲ್ಲದಿದ್ದಲ್ಲಿ ಉದ್ಯೋಗವನ್ನು ಒದಗಿಸಲಾಗುವುದು.

### 3) ದೂರುಗಳು ಮತ್ತು ಕುಂದು ಕೊರತೆಗಳ ನಿವಾರಣೆ:

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಸಿದಂತೆ ದೂರುಗಳು ಮತ್ತು ಕುಂದು ಕೊರತೆಗಳ ಕುರಿತು ಸಹಾಯವಾಣಿಗೆ ಕರೆ ಮಾಡುವುದರ ಮುಖಾಂತರ ದೂರನ್ನು ದಾಖಲಿಸಬಹುದಾಗಿದೆ. ಈ ರೀತಿ ಸಲ್ಲಿಸಲಾಗುವ ದೂರುಗಳ ಕುರಿತು ಅನುಪಾಲನೆ ಮಾಹಿತಿಯನ್ನು ಸಹ ಮುಖಾಂತರ ಪಡೆಯಬಹುದಾಗಿರುತ್ತದೆ.

25–02–2013 ರಂದು ಈ ದೂರವಾಣಿ ಪ್ರಾರಂಭವಾಗಿದ್ದು ಇದುವರೆಗೆ (17–4–2013) 4822 ಸಂಖ್ಯೆಗಳ ದೂರವಾಣಿ ಕರೆಗಳು ಬಂದಿವೆ. ಅವುಗಳಲ್ಲಿ ಉದ್ಯೋಗ ಬೇಡಿಕೆಗಾಗಿ 138 ಸಂಖ್ಯೆ, ಉದ್ಯೋಗ ಚೀಟಿಗಾಗಿ 1692 ಸಂಖ್ಯೆ, ದೂರು ಕುರಿತಂತೆ 491 ಸಂಖ್ಯೆ ಹಾಗೂ ಯೋಜನೆ ಕುರಿತಂತೆ ಮಾಹಿತಿಗಾಗಿ 2501 ಸಂಖ್ಯೆ ದೂರುಗಳು ಬಂದಿವೆ. ಪ್ರತಿ ದಿನ ಇವುಗಳ ವಿವರಗಳನ್ನು ಡಾಕೆಟ್ ಸಂಖ್ಯೆಗಳ ಸಹಿತ ಇಮೇಲ್ ಮೂಲಕ ಪಡೆದು ಸಂಬಂಧ ಪಟ್ಟ ಜಿಲ್ಲೆ / ತಾಲ್ಲೂಕು / ಗ್ರಾಮ ಪಂಚಾಯತಿಗಳಿಗೆ ಇಮೇಲ್ ಮೂಲಕ ಕಳುಹಿಸಿ ಮಾಹಿತಿಯನ್ನು ಜಿಲ್ಲಾ ಪಂಚಾಯತಿಗಳಿಂದ ಪಡೆದು ಸಂಬಂಧ ಪಟ್ಟ ದೂರವಾಣಿ ಮಾಡಿದವರಿಗೆ ಮಾಹಿತಿ ಒದಗಿಸಲಾಗುತ್ತದೆ.

ಉಚಿತ ಕರೆ ಸಹಾಯವಾಣಿಯ ಸೌಲಭ್ಯವು ಎಲ್ಲಾ ನಾಗರೀಕರಿಗೂ ಲಭ್ಯವಿರುತ್ತದೆ. ಇದರಲ್ಲಿ ಸಕಾಲಿಕವಾದ ಮಾಹಿತಿ/G2C ಸೇವೆಗಳು ಲಭ್ಯವಿದೆ. ಸ್ಥಳೀಯ ಭಾಷೆಗಳಲ್ಲಿಯೇ ವ್ಯವಹರಿಸುವ ನಿರ್ವಹಣಾ ಸಾಮರ್ಥ್ಯ ಹೊಂದಿರುತ್ತದೆ. ಇದಕ್ಕೆ ಕರೆ ಮಾಡುವುದರ ಮುಖಾಂತರ ಒಂದು ಸಾಮಾನ್ಯವಾದ ಹಾಗೂ ವಿಶಿಷ್ಟವಾದ ಸಂಖ್ಯೆಯನ್ನು ಪಡೆಯಬಹುದಾಗಿರುತ್ತದೆ. ಇದರಿಂದಾಗಿ ತಮ್ಮ ಕರೆಯ ಕುರಿತಾದ ವಿಷಯಗಳ ಪರಿಶೋಧನೆ, ಅನುಪಾಲನೆ, ಹಾಗೂ ಅದರ ಪ್ರಸ್ತುತ ಹಂತವನ್ನು ತಿಳಿಯುವ ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಪಾರದರ್ಶಕತೆಯ ಹೆಚ್ಚಿಸುವಲ್ಲಿ ಸ್ಪಂದನಶೀಲ ಆಡಳಿತ ನೀಡುವಲ್ಲಿ ಕರ್ನಾಟಕ ಮತ್ತೊಂದು ಹೆಜ್ಜೆ ಇಟ್ಟಿದೆ.




# ಕನಿಷ್ಠ ಕೂಲಿ ದರ – ಕೆಲಸದ ಪರಿಮಾಣ

**ಯೋಜನೆಯಡಿ ನೀಡಲಾಗುತ್ತಿದ್ದ ಕೂಲಿಯ ದರವನ್ನು 2013–14ನೇ ಸಾಲಿನಿಂದ ರೂ. 155 ರಿಂದ ರೂ. 174 ಗಳಿಗೆ ಹೆಚ್ಚಿಸಿ ಅಕುಶಲ ಕೂಲಿ ಕಾರ್ಮಿಕರಿಗೆ ಪಾವತಿಸುವಂತೆ ಕೇಂದ್ರ ಸರ್ಕಾರವು ಆದೇಶಿಸಿದೆ.**

MGNREGS ಯೋಜನೆಯಡಿ, ಅಧಿನಿಯಮದನ್ವಯ ಕಾಲಕಾಲಕ್ಕೆ ನಿಗದಿಪಡಿಸಲಾಗುವ ಕನಿಷ್ಠ ಕೂಲಿ ದರವನ್ನು ಯೋಜನೆಯಡಿ ಕೆಲಸನಿರ್ವಹಿಸುವ ನೊಂದಾಯಿತ ಕೂಲಿ ಕಾರ್ಮಿಕರಿಗೆ ನೀಡಬೇಕಾಗಿರುತ್ತದೆ. ಈ ಸಂಬಂಧ, ಈ ಹಿಂದೆ, ವೈಜ್ಞಾನಿಕವಾಗಿ ಅಕುಶಲ ಕೂಲಿ ಕಾರ್ಮಿಕರು ದಿನದ ಒಂದು ಗಂಟೆ ವಿರಾಮವು ಸೇರಿದಂತೆ ಒಟ್ಟು ಒಂಭತ್ತು ಗಂಟೆಗಳ ಕಾಲ ಕೆಲಸ ನಿರ್ವಹಿಸಿದಲ್ಲಿ ಯಾವ ಯಾವ ಚಟುವಟಿಕೆಗಳಿಗೆ ಎಷ್ಟು ಪ್ರಮಾಣದ ಕೆಲಸ ನಿರ್ವಹಿಸಲು ಸಾಧ್ಯವೆಂಬ ಬಗ್ಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಲ ಮತ್ತು ಚಲನೆ ಅಧ್ಯಯನ ನಡೆಸಿ ಕೆಲಸದ ಪರಿಮಾಣವನ್ನು 2009–10ನೇ ಸಾಲಿನಲ್ಲಿ ನಿರ್ಧರಿಸಲಾಗಿರುತ್ತದೆ.

2009–10ನೇ ಸಾಲಿನಲ್ಲಿ ಕೂಲಿ ಕಾರ್ಮಿಕರಿಗೆ ನೀಡುವ ಕೂಲಿ ದರ ರೂ.82/– ಗಳಿದ್ದು, ಅದಕ್ಕೆ ಸರಿ ಹೊಂದುವಂತೆ ವಿವಿಧ ಚಟುವಟಿಕೆಗಳನ್ನು ಅಳತೆ ಮಾಡಲು ಇರುವ ಘಟಕ ಒಂದಕ್ಕೆ (Rate per unit) ದರವನ್ನು ದಿನಾಂಕ:02–01–2009ರಲ್ಲಿ ತಿಳಿಸಲಾಗಿದ್ದು, ತದನಂತರ ಕನಿಷ್ಠ ಕೂಲಿ ದರವು ಅಧಿನಿಯಮದಡಿ ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿದ್ದು, ಕನಿಷ್ಠ ಕೂಲಿ ದರ ಬದಲಾವಣೆಯಾದ ಪ್ರತಿ ಸಮಯದಲ್ಲೂ ವಿವಿಧ ಚಟುವಟಿಕೆಗಳ ಪ್ರತಿ ಘಟಕಕ್ಕೆ ನಿಗಧಿಪಡಿಸಿರುವ ದರವನ್ನು ಕೂಡ ಪರಿಷ್ಕರಿಸಿ ಆದೇಶಿಸಬೇಕಾಗಿದೆ. ಆದರೆ, ಕೂಲಿ ಕಾರ್ಮಿಕರು ದಿನ ಒಂದರಲ್ಲಿ ಒಂದು ಗಂಟೆ ವಿರಾಮವು ಸೇರಿದಂತೆ ಒಟ್ಟು ಒಂಭತ್ತು ಗಂಟೆಗಳ ಕಾಲ ಕೆಲಸ ನಿರ್ವಹಿಸಿ ವಿವಿಧ ಚಟುವಟಿಕೆಗಳಡಿ ಉತ್ಪತ್ತಿ ಮಾಡಲಾಗುವ ಕೆಲಸದ ಪ್ರಮಾಣದಲ್ಲಿ ಮಾತ್ರ ಯಾವುದೇ ಬದಲಾವಣೆ ಇರುವುದಿಲ್ಲ. ಆದ್ದರಿಂದ ಈ ಆಧಾರದ ಮೇಲೆ ನಿಗಧಿಪಡಿಸಿದ ಕೆಲಸದ ಪ್ರಮಾಣವನ್ನು ಹಾಗೆಯೇ ಇರಿಸಿ ಪ್ರತಿ ಸಮಯದಲ್ಲಿ ಬದಲಾವಣೆಯಾದ ಕನಿಷ್ಠ ಕೂಲಿ ದರಕ್ಕೆ ಈ ವರೆಗೆ ವರ್ಷಾವಾರು ಘಟಕ ಒಂದಕ್ಕೆ ದರವನ್ನು ನಿಗದಿ ಪಡಿಸಿಕೊಂಡು ತಿಳಿಸಲಾಗಿರುತ್ತದೆ. 2013–14ನೇ ಸಾಲಿಗೆ ಕೂಲಿಯ ದರವನ್ನು ರೂ.155/– ಗಳಿಂದ ರೂ.174/– ಗಳಿಗೆ ಕೇಂದ್ರ ಸರ್ಕಾರವು ಹೆಚ್ಚಿಸಿ ನಿಗಧಿಪಡಿಸಿ ಅದರಂತೆಯೇ ಅಕುಶಲ ಕೂಲಿ ಕಾರ್ಮಿಕರಿಗೆ ಪಾವತಿಸುವಂತೆ ಆದೇಶಿಸಿದೆ.

ಇದರನ್ವಯ Schedule of rates for wages for the year 2013–14 ದಿನಾಂಕ:01–04–2013 ರಿಂದ ಅನ್ವಯ ವಾಗುವಂತೆ ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ: 230/ಉಖಾಯೋ/2011 ದಿನಾಂಕ:21–03–2013 ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿಲಾಗಿರುತ್ತದೆ.

ಏತನ್ಮಧ್ಯೆ ಪುನಃ ಕೆಲಸದ ಪರಿಮಾಣವನ್ನು ನಿಗಧಿಪಡಿಸಲು ಪ್ರಾದೇಶಿಕವಾರು ಕೆಲವು ಪ್ರದೇಶಗಳನ್ನು/ ಜಿಲ್ಲೆಗಳನ್ನು ಆಯ್ಕೆಮಾಡಿಕೊಂಡು ವಿವಿಧ ಅನುಷ್ಠಾನ ಇಲಾಖೆಗಳ ಸಹಯೋಗದೊಂದಿಗೆ ಕಾಲ ಮತ್ತು ಚಲನೆಯ ಅಧ್ಯಯನ ನಡೆಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ.

MGNREGS ಯೋಜನೆಯಡಿ, ಅಧಿನಿಯಮದ ಪ್ರಕರಣ 6(2) ರ ಪ್ರಕಾರ, ಕೇಂದ್ರ ಸರ್ಕಾರವು ಕೂಲಿ ದರವನ್ನು ಅಧಿಸೂಚಿಸಿ ನಿಗದಿಪಡಿಸುವವರೆಗೂ, ಆಯಾ ರಾಜ್ಯಗಳಲ್ಲಿ ರಾಜ್ಯ ಸರ್ಕಾರವು ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ಅಧಿನಿಯಮ 1948ರಡಿ ನಿಗಧಿಪಡಿಸಿರುವ ಕೂಲಿಯ ದರವನ್ನೇ ಪಾವತಿಸುವಂತೆ ಸೂಚಿಸಲಾಗಿರುತ್ತದೆ. ಪ್ರಾರಂಭದಲ್ಲಿ, ಕೂಲಿಯ ದರವನ್ನು ರಾಜ್ಯ ಸರ್ಕಾರವು ಕನಿಷ್ಠ ಕೂಲಿ ವೇತನದ ಅಧಿನಿಯಮದಡಿ ನಿಗದಿ ಪಡಿಸಿರುವುದನ್ನೇ ಕೂಲಿ ಕಾರ್ಮಿಕರಿಗೆ ಪಾವತಿಸಲಾಗುತ್ತಿತ್ತು. ತರುವಾಯ, ದೇಶದ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಅದಿನಿಯಮದ ಪ್ರಕರಣ 6(2)ರ ಪ್ರಕಾರ ನಿಗಧಿಪಡಿಸಿದಂತೆ ಕೂಲಿಯ ವೇತನವನ್ನೇ ಕಳೆದ ನಾಲ್ಕು ವರ್ಷಗಳಿಂದ ಕೂಲಿ ಕಾರ್ಮಿಕರಿಗೆ MGNREGS ಯೋಜನೆಯಡಿ ಪಾವತಿಸಲಾಗುತ್ತಿದೆ.

ಕೂಲಿಯ ವೇತನವನ್ನು ಅಕುಶಲ ಕಾರ್ಮಿಕರಿಗೆ ವಾರಕ್ಕೊಮ್ಮೆ ಅಥವಾ 15 ದಿನಗಳಿಗೆ ಮೀರದಂತೆ ಪಾವತಿಸಬೇಕಾಗಿದೆ. ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ವೇತನ ಮತ್ತು ಯಾವುದೇ ಲಿಂಗ ಬೇಧವಿರುವುದಿಲ್ಲ. ಅಕುಶಲ ಕಾರ್ಮಿಕರಿಗೆ ಪಾವತಿಸುವ ಕೂಲಿ ವೇತನವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸುತ್ತದೆ. ಕೂಲಿ ವೇತನವನ್ನು ಅಕುಶಲ ಕಾರ್ಮಿಕರಿಗೆ ಬ್ಯಾಂಕ್/ಅಂಚೆಕಛೇರಿಯ ಉಳಿತಾಯದ ಖಾತೆಗಳ ಮೂಲಕ ಪಾವತಿಸಲಾಗುತ್ತಿದೆ. ಯಾವುದೇ ಕಾರಣಕ್ಕೂ ಕೂಲಿಯ ವೇತನವನ್ನು ನಗದಾಗಿ ಪಾವತಿಸುವಂತಿಲ್ಲ. ಕೂಲಿ ವೇತನವನ್ನು ಯೋಜನೆಯ ಪ್ರಾರಂಭದ ವರ್ಷಗಳಲ್ಲಿ ಪಾವತಿಸುವಲ್ಲಿ ವಿಳಂಬವಾಗುತ್ತಿತ್ತು ಮತ್ತು ಮಧ್ಯವರ್ತಿಗಳ ಪ್ರವೇಶದಿಂದ ಕೂಲಿ ಕಾರ್ಮಿಕರು ತಾವು ದುಡಿದ ಕೂಲಿಯ ಹಣವನ್ನು ಸರಿಯಾಗಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಕಾಲ ವಿಳಂಬನೆ ಮತ್ತು ಮಧ್ಯವರ್ತಿಗಳ ಪ್ರವೇಶದ ಅಂಶಗಳನ್ನು ಗಮನಿಸಿ ರಾಜ್ಯ ಸರ್ಕಾರವು ಮೊಟ್ಟ ಮೊದಲನೆಯದಾಗಿ e-FMS ಯೋಜನೆಯನ್ನು ರಾಜ್ಯದಲ್ಲಿ 2011–12ನೇ ಸಾಲಿನಲ್ಲಿ ಆಯ್ದ ಕೆಲವು ಜಿಲ್ಲೆಗಳಲ್ಲಿ ಜಾರಿಗೊಳಿಸಿದ್ದು, ತದನಂತರ ಎಲ್ಲಾ ಜಿಲ್ಲೆಗಳಿಗೂ ಯೋಜನೆಯನ್ನು ಜಾರಿಗೊಳಿಸಲು ಕ್ರಮ ವಹಿಸಲಾಗಿದೆ. ಕೂಲಿ ಕಾರ್ಮಿಕರು ತಾವು ದುಡಿದ ಕೂಲಿಯ ಹಣವನ್ನು ಬ್ಯಾಂಕಿನ ಆಯಾ ಜಿಲ್ಲಾ e-FMS ಖಾತೆಯಿಂದ ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಮಾಡಿ ಪಾವತಿಸುವುದು ಈ ಯೋಜನೆಯ ಮೂಲ ಉದ್ದೇಶವಾಗಿರುತ್ತದೆ. ಈ ಒಂದು ಕ್ರಮದಿಂದ ಕೂಲಿ ಪಾವತಿಯಲ್ಲಿ ಆಗುತ್ತಿರುವ ವಿಳಂಬವನ್ನು, ಮಧ್ಯವರ್ತಿಗಳು ಪ್ರವೇಶ ಮಾಡುವುದನ್ನು ಹಾಗೂ ಅನುದಾನವು ಒಂದು ಕಡೆ ನಿಲುಗಡೆಯಾಗುವುದನ್ನು ತಡೆಗಟ್ಟಬಹುದಾಗಿರುತ್ತದೆ.

ಯೋಜನೆಯನ್ನು ಜಾರಿಗೊಳಿಸಿದಂದಿನಿಂದ ಈ ತಹಲ್‌ವರೆಗೂ ವರ್ಷಾವಾರು ಅಕುಶಲ ಕಾರ್ಮಿಕರಿಗೆ ಪಾವತಿಸಿದ ಕೂಲಿಯ ದರದ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ. | ವರ್ಷ | ಪಾವತಿಗಾಗಿ ಅಕುಶಲ ಕಾರ್ಮಿಕರಿಗೆ ಅಧಿಸೂಚಿಸಿ ನಿಗದಿಪಡಿಸಿದ ಕೂಲಿ ದರ (ರೂ.ಗಳಲ್ಲಿ) |
|---|---|---|
| 1. | 2006-07 | 69/- |
| 2. | 2007-08 | 74/- |
| 3. | 2008-09 | 82/- |
| 4. | 2009-10 | 82/- |
| 5. | 2010-11 | 100/- |
| 6. | 2011-12 | 125/- |
| 7. | 2012-13 | 155/- |
| 8. | 2013-14 | 174/- |




# ಉದ್ಯೋಗ ಖಾತರಿ ಯೋಜನೆ –ಒಂಬುಡ್ಸ್‌ಮನ್‌ರವರ ಪಾತ್ರ

–ಟಿ.ಎನ್. ಕೃಷ್ಣಮೂರ್ತಿ

**ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ದೂರುಗಳು ಕೇಳಿಬಂದಲ್ಲಿ, ದೂರುಗಳನ್ನು ತನಿಖೆ ಮಾಡಲು ಸ್ವತಂತ್ರ ಅಧಿಕಾರವನ್ನು ಹೊಂದಿರುವ ಒಂಬುಡ್ಸಮನ್ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.**

**ಈ ಬಗ್ಗೆ ಒಂದು ಕಿರುಚಿತ್ರಣ ಈ ಲೇಖನದಲ್ಲಿದೆ.**

"ಒಂಬುಡ್ಸ್‌ಮನ್" ಪದವು ಮೂಲತಃವಾಗಿ ಸ್ವೀಡಿಶ್ ಭಾಷೆಯಿಂದ ಬಂದಿರುತ್ತದೆ. ಇದು "ಪ್ರತಿನಿಧಿ" ಎಂಬ ಅರ್ಥವನ್ನು ನೀಡುತ್ತದೆ. ಪ್ರಜೆಗಳ ಹಕ್ಕುಗಳನ್ನು ರಕ್ಷಿಸಲು ಕ್ರಿ.ಶ 1809ರಲ್ಲಿ ಸ್ವೀಡನ್ ಸಂಸದೀಯ ಮಂಡಳಿಯಲ್ಲಿ ಒಂಬುಡ್ಸ್‌ಮನ್ ಪದವನ್ನು ಮೊದಲಿಗೆ ಬಳಕೆ ಮಾಡಲಾಯಿತು.

ಒಂಬುಡ್ಸ್‌ಮನ್ ಅಧಿಕಾರಿಯು ಸಾಮಾನ್ಯವಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ನೇಮಿಸಲ್ಪಟ್ಟು ಸಾರ್ವಜನಿಕ ಹಕ್ಕುಗಳು ಮತ್ತು ಹಿತಾಸಕ್ತಿಗಳ ಉಲ್ಲಂಘನೆಯಾದಲ್ಲಿ, ಈ ಬಗ್ಗೆ ಬಂದ ದೂರುಗಳನ್ನು ತನಿಖೆ ಮಾಡುವ ಸ್ವತಂತ್ರ ಅಧಿಕಾರವನ್ನು ಹೊಂದಿದವರಾಗಿರುತ್ತಾರೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕೇಂದ್ರ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಯಾಗಿದ್ದು, ರಾಜ್ಯ ಸರ್ಕಾರಗಳ ಸಹಯೋಗ ದೊಂದಿಗೆ 2005ರಲ್ಲಿ ಈ ಯೋಜನೆಯನ್ನು ಅನುಷ್ಟಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ದಿನಾಂಕ: 02–02–2006ರಿಂದ ಹಂತ ಹಂತವಾಗಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಿಸಲಾಗಿದೆ. ಈ ಯೋಜನೆಯಡಿ ಪಾರದರ್ಶಕತೆಯನ್ನು ಕಾಪಾಡುವ ಉದ್ದೇಶದಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ 2005ರ ಪ್ರಕರಣ 27ರ ಉಪ ಪ್ರಕರಣ(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವೀಕರಿಸಲಾಗುವ ದೂರಗಳನ್ನು ಪರಿಗಣಿಸಿ ವಿಲೇಗೊಳಿಸಲು ಒಂಬುಡ್ಸ್‌ಮನ್‌ಗಳನ್ನು ನೇಮಿಸಲು ಸೂಚನೆಗಳನ್ನು ಹೊರಡಿಸಿರುತ್ತದೆ.

## ಆಯ್ಕೆ ಸಮಿತಿಯ ರಚನೆ

ಕೇಂದ್ರ ಸರ್ಕಾರವು ಒಂಬುಡ್ಸ್‌ಮನ್‌ರವರನ್ನು ನೇಮಿಸಲು ರಾಜ್ಯಮಟ್ಟದಲ್ಲಿ ಆಯ್ಕೆ ಸಮಿತಿಯನ್ನು ಈ ಕೆಳಗಿನಂತೆ ರಚಿಸಿರುತ್ತದೆ.

ಸಹಾಯಕ ನಿರ್ದೇಶಕರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

1) ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ – ಅಧ್ಯಕ್ಷರು
2) ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪ್ರತಿನಿಧಿ – ಸದಸ್ಯರು
3) ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ನಾಮ ನಿರ್ದೇಶನ ಮಾಡುವ ನಾಗರಿಕ ಸಮಾಜದ ಒಬ್ಬ ಪ್ರತಿನಿಧಿ– ಸದಸ್ಯರು
4) ರಾಜ್ಯ ಉಸ್ತುವಾರಿ ಇಲಾಖೆಯ ಕಾರ್ಯದರ್ಶಿ /ಪ್ರಧಾನ ಕಾರ್ಯದರ್ಶಿಗಳು, ಪಂಚಾಯತ್ ರಾಜ್ ಇಲಾಖೆ– ಸದಸ್ಯ ಕಾರ್ಯದರ್ಶಿ.

ರಾಜ್ಯ ಸರ್ಕಾರವು ಪ್ರತಿಯೊಂದು ಜಿಲ್ಲೆಗೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಒಂಬುಡ್ಸ್‌ಮನ್‌ರವರನ್ನು ನೇಮಕ ಮಾಡಲು ಅವಕಾಶವಿದೆ. ಆದರೆ ಒಂದು ಜಿಲ್ಲೆಗೆ ಒಂಬುಡ್ಸ್‌ಮನ್ ರವರ ಸಂಖ್ಯೆ ಮೂರನ್ನು ಮೀರಬಾರದು.

## ನೇಮಕಾತಿ

ಒಂಬುಡ್ಸ್‌ಮನ್‌ರವರನ್ನು ನೇಮಕ ಮಾಡಲು ವ್ಯಾಪಕ ಪ್ರಚಾರ ಮಾಡಿ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ.

### ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಹೊಂದಿರಬೇಕಾದ ಅರ್ಹತೆಗಳು :–

ಈ ಕೆಳಕಂಡ ಯಾವುದಾದರೊಂದು ಕ್ಷೇತ್ರದಲ್ಲಿ ಕನಿಷ್ಟ ಪಕ್ಷ 20 ವರ್ಷಗಳ ಅನುಭವ ಹೊಂದಿರಬೇಕು.

ಅ) ಸಾರ್ವಜನಿಕ ಆಡಳಿತ
ಆ) ಕಾನೂನು
ಇ) ಶೈಕ್ಷಣಿಕ
ಈ) ಸಮಾಜ ಸೇವೆ
ಉ) ನಿರ್ವಹಣೆ

- ಅರ್ಜಿ ಸಲ್ಲಿಸುವವರು ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗಿರಬಾರದು.
- ತಪಾಸಣೆ/ಭೇಟಿ ಕ್ಷೇತ್ರ ವೀಕ್ಷಣೆ ಕೆಲಸಗಳಿಗೆ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಳ್ಳಲು ಸಶಕ್ತರಾಗಿರಬೇಕು.
- ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ಗರಿಷ್ಟ ವಯಸ್ಸು 62 ವರ್ಷ ಮೀರಿರಬಾರದು.
- ಆಯ್ಕೆ ಸಮಿತಿಯು ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಿ ಆಯ್ಕೆಯಾದ ಅಭ್ಯರ್ಥಿಗಳನ್ನು ಕಛೇರಿಯ ಜಾಲತಾಣದಲ್ಲಿ ಪ್ರಕಟಿಸಿ, ಪ್ರಕಟಣೆ ಯಾದ ದಿನಾಂಕದಿಂದ 30ದಿನಗಳ ಒಳಗಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸಲ್ಲಿಸಲು ಪ್ರಕಟಿಸಲಾಗುವುದು.
- ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ಅಂತಿಮವಾಗಿ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಆಯಾ ಜಿಲ್ಲೆಗಳಿಗೆ ಒಂಬುಡ್ಸ್‌ಮನ್‌ರವರನ್ನು ನೇಮಿಸಿ ಆದೇಶ ಹೊರಡಿಸಲಾಗುವುದು.

## ಅಧಿಕಾರಗಳು

- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ದೂರುಗಳನ್ನು ಸ್ವೀಕರಿಸುವುದು.
- ದೂರುಗಳನ್ನು ಕಾಯ್ದೆ ಕಾನೂನಿಗನುಗುಣವಾಗಿ ವಿಲೇಗೊಳಿಸುವುದು.
- ದೂರುಗಳಿಗೆ ಸಂಬಂಧಪಟ್ಟಂತೆ ತನಿಖೆ ಮಾಡಲು ನಿರ್ದೇಶನ ನೀಡುವುದು.
- ತಪ್ಪಿತಸ್ಥರ ವಿರುದ್ಧ ಎಫ್.ಐ.ಆರ್. ದಾಖಲಿಸು ವಂತಹ ಅಧಿಕಾರ ಉಳ್ಳವರಾಗಿರುತ್ತಾರೆ.
- ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಹಾಗೂ ದಂಡನಾ ಕ್ರಮಗಳನ್ನು ಕೈಗೊಳ್ಳಲು ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಲು ಅಧಿಕಾರ ಉಳ್ಳವರಾಗಿರುತ್ತಾರೆ.
- ದೂರುದಾರರು ತಪ್ಪಿತಸ್ಥರು ಎಂದು ಕಂಡು ಬಂದಲ್ಲಿ ಸದರಿಯವರ ವಿರುದ್ಧ ಮುಖ್ಯಕಾರ್ಯದರ್ಶಿಗಳು, ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಇಲಾಖೆಗೆ ವರದಿ ನೀಡಿ ಕಾನೂನು ಕ್ರಮಕೈಗೊಳ್ಳುವಂತೆ ಮಾಡುವುದು.

## ಕರ್ತವ್ಯಗಳು

- ಕಛೇರಿಯ ಆಡಳಿತಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸುವುದು.
- ದೂರುದಾರರಿಗೆ ನ್ಯಾಯಯುತವಾಗಿ ನ್ಯಾಯ ವನ್ನು ಒದಗಿಸುವುದು.

- ಪ್ರತಿ ತಿಂಗಳು ಮಾಸಿಕ ಪ್ರಗತಿಯ ವರದಿ ಹಾಗೂ ವಾರ್ಷಿಕ ವರದಿಯನ್ನು ಮುಖ್ಯಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ರಾಜ್ಯ ಉಸ್ತುವಾರಿ ಇಲಾಖೆಗೆ ಕಳುಹಿಸುವುದು.
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕುಂದುಕೊರತೆಯ ವಿಭಾಗದಿಂದ ಯಾವುದಾದರೂ ದೂರುಗಳ ಬಗ್ಗೆ ಮಾಹಿತಿಯನ್ನು ಕೇಳಿದರೆ ತನಿಖೆ ಮಾಡಿ ಮಾಹಿತಿಯನ್ನು ಒದಗಿಸುವುದು.
- ಪ್ರತಿಯೊಂದು ದೂರಿನ ಮಾಹಿತಿಯನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಜಾಲತಾಣದಲ್ಲಿ ಆರೋಹಣ ಮಾಡುವುದು.

## ಒಂಬುಡ್ಸ್‌ಮನ್‌ರವರು ವಿಚಾರಣೆಗೆ ಪರಿಗಣಿಸ ಬಹುದಾದ ದೂರುಗಳ ವಿವರ.

- ಗ್ರಾಮ ಸಭಾ.
- ಕುಟುಂಬ ನೋಂದಣಿ ಹಾಗೂ ಉದ್ಯೋಗ ಚೀಟಿ
- ವಿತರಣೆ.
- ಕೆಲಸಗಳ ಬೇಡಿಕೆ.
- ಕೆಲಸಕ್ಕಾಗಿ ಅರ್ಜಿ ಸಲ್ಲಿಸುವಿಕೆ.
- ನಿರುದ್ಯೋಗ ಭತ್ಯೆ.
- ಲಿಂಗ ತಾರತಮ್ಯ.
- ಕೆಲಸ ಮಾಡುವ ಸ್ಥಳದಲ್ಲಿ ಒದಗಿಸಬೇಕಾದ ಸೌಲಭ್ಯ.
- ಕೆಲಸದ ಅಳತೆ.
- ಯಂತ್ರೋಪಕರಣಗಳ ಬಳಕೆ.
- ಗುತ್ತಿಗೆದಾರರ ತೊಡಗಿಸುಗೊಳ್ಳುವಿಕೆ.
- ಕಾಮಗಾರಿಗಳ ಗುಣಮಟ್ಟ.
- ಬ್ಯಾಂಕ್ ಅಥವಾ ಅಂಚೆ ಕಛೇರಿ ಖಾತೆಗಳ ಕಾರ್ಯಾಚರಣೆ.
- ದೂರುಗಳ ನೋಂದಣಿ ಮತ್ತು ವಿಲೇವಾರಿ.
- ಕೂಲಿ ಪಟ್ಟಿ ಪರಿಶೀಲನೆ.
- ದಾಖಲಾತಿಗಳ ತನಿಖೆ.
- ಅನುದಾನದ ಬಳಕೆ.
- ಅನುದಾನ ಬಿಡುಗಡೆ.
- ಸಾಮಾಜಿಕ ಪರಿಶೋಧನೆ.
- ದಾಖಲಾತಿಗಳ ನಿರ್ವಹಣೆ.

## ರಾಜ್ಯದಲ್ಲಿನ ಪರಿಸ್ಥಿತಿ

ಪ್ರಸ್ತುತ ರಾಜ್ಯದಲ್ಲಿ 19 ಜಿಲ್ಲೆಗಳಲ್ಲಿ ಒಂಬುಡ್ಸ್‌ಮನ್ ರವರು ಹಾಗೂ ಒಂದು ಜಿಲ್ಲೆಯಲ್ಲಿ ಡೆಪ್ಯೂಟಿ ಒಂಬುಡ್ಸ್‌ಮನ್‌ರವರು ಕಾರ್ಯನಿರ್ವಹಿಸುತ್ತಿದ್ದು, ಉಳಿದ ಜಿಲ್ಲೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಗತಿ ಹಂತದಲ್ಲಿದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಒಂಬುಡ್ಸ್‌ಮನ್ ನೇಮಕವಾದರೂ ಎನ್ನುವಾಗಲೇ ಅಲ್ಲಿ ಇಲ್ಲಿ ಕೇಳಿ ಬರುತ್ತಿದ್ದ ಆರೋಪಗಳನ್ನು ಸಾಬೀತು ಪಡಿಸಲು ಒಂದು ವೇದಿಕೆ ಸೃಷ್ಟಿಯಾಯಿತು. ಒಂಬುಡ್ಸ್‌ಮನ್‌ರವರು ಕಾರ್ಯ ವೈಖರಿ ನೋಡಿದರೆ ತಪ್ಪು ಒಪ್ಪಿಕೊಳ್ಳುವಂತೆ ಮಾಡುವುದು ಒಂದೆಡೆಯಾದರೆ ಇನ್ನೊಂದಡೆ ಭ್ರಷ್ಟಾಚಾರಕ್ಕೆ ಯೋಜನೆಯಡಿ ಅವಕಾಶ ಕಲ್ಪಿಸದಂತೆ ಕ್ರಮವಹಿಸುತ್ತಿರುವುದು ಕಂಡು ಬರುತ್ತದೆ. ಉದಾಹರಣೆಗೆ ರಾಜ್ಯದ ಹಲವಾರು ಜಿಲ್ಲೆಗಳಿಂದ ಸುಮಾರು 1280 ದೂರುಗಳು ದಾಖಲಾಗಿದ್ದು, ಅದರಲ್ಲಿ 1036 ದೂರುಗಳನ್ನು ಪರಿಶೀಲಿಸಿ ವಿಲೇ ಮಾಡಿದ್ದು, ದೂರುಗಳನ್ನು ವಿಶ್ಲೇಷಣೆ ಮಾಡಿದಾಗ ಕಾಮಗಾರಿಯಲ್ಲಿ ಆದ ಅವ್ಯವಹಾರ ಸಾಬೀತಾಗಿ ರೂ.12,82,933.00ಗಳನ್ನು ಮರಳಿ ಸರ್ಕಾರಕ್ಕೆ ಪಡೆಯಲಾಗಿದೆ. ಅನೇಕ ಅಧಿಕಾರಿ/ಅಧಿಕಾರೇತರರನ್ನು ಶಿಕ್ಷೆಗೆ ಗುರಿಪಡಿಸಲಾಗಿದೆ. ಕಾಲಮಿತಿಯೊಳಗೆ ಒಂಬುಡ್ಸ್‌ಮನ್ ಅಧಿಕಾರಿಯವರು ತನಿಖೆ ಮಾಡಿ ಕ್ರಮ ಕೈಗೊಳ್ಳುತ್ತಿರುವುದು. ಅವ್ಯವಹಾರದ ನಿಯಂತ್ರಣಕ್ಕೆ ಹಿಡಿದ ಕನ್ನಡಿ ಆಗಿದೆ.

ಚಿಕ್ಕಮಗಳೂರು ಜಿಲ್ಲೆಯ ಒಂಬುಡ್ಸ್‌ಮನ್‌ರವರು ತಪ್ಪಿತಸ್ಥರಿಂದ ಒಂದು ವರ್ಷದ ಅವಧಿಯಲ್ಲಿ ರೂ. 10,07,660.00ಗಳನ್ನು ವಸೂಲಿ ಮಾಡಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಖಾತೆಗೆ ಜಮಾ ಮಾಡಿಸಿರುತ್ತಾರೆ. ಭ್ರಷ್ಟಾಚಾರ ಮಾಡುತ್ತಿರುವ ವ್ಯಕ್ತಿಗಳಿಗೆ ಇದೊಂದು ಎಚ್ಚರಿಕೆ ಗಂಟೆಯಾಗಿದೆ ಎಂದರೆ ತಪ್ಪಿಲ್ಲ. ಯೋಜನೆಯ ಸಮರ್ಪಕ, ಪಾರದರ್ಶಕ ಅನುಷ್ಠಾನದಲ್ಲಿ ಒಂಬುಡ್ಸ್‌ಮನ್‌ರವರು ತುಂಬಾ ಪ್ರಮುಖ ಪಾತ್ರವಹಿಸುತ್ತಿರುವುದು ಶ್ಲಾಘನೀಯ ಕೆಲಸವಾಗಿರುತ್ತದೆ.

| ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಂಬುಡ್ಸ್‌ಮನ್‌ಗಳ ನೇಮಕಾತಿ ಈ ಕೆಳಕಂಡವರನ್ನು ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಜಿಲ್ಲೆಗಳಿಗೆ ಒಂಬುಡ್ಸ್‌ಮನ್ ಆಗಿ ನೇಮಕ ಮಾಡಿ ಸರ್ಕಾರ | | | | |
|---|---|---|---|---|
| ಕ್ರ. ಸಂ. | ಜಿಲ್ಲೆಯ ಹೆಸರು | ಹೆಸರು (ಶ್ರೀ/ ಶ್ರೀಮತಿ) | ದೂರವಾಣಿ ಸಂಖ್ಯೆ | ಈ ಹಿಂದೆ ಕಾರ್ಯನಿರ್ವಹಿಸಿದ ವಿವರಗಳು / ಅನುಭವಗಳು |
| | | | ಓಂಬುಡ್ಸ್‌ಮನ್ | |
| 1 | ಬಿಜಾಪುರ | ಬಿ.ಎಮ್. ಸಿಂದಗಿ | 9448018883 | ನಿವೃತ್ತ ಜಿಲ್ಲಾ ನ್ಯಾಯಧೀಶರು, |
| 2 | ಚಿಕ್ಕಮಗಳೂರು. | ಬಿ.ರಾಮಸ್ವಾಮಿ | 9740066094 | ನಿವೃತ್ತ ಡಿಜಿಎಮ್, ಕೈನರಾ ಬ್ಯಾಂಕ್ |
| 3 | ದಕ್ಷಿಣ ಕನ್ನಡ | ಶೀನಶೆಟ್ಟಿ | 9449642137<br>9480850152 | ಸಮಾಜ ಸೇವೆ |
| 4 | ಬೆಳಗಾಂ | ಎ.ಬಿ. ಒಡೆಯರ್ | 9448419062 | ನಿವೃತ್ತ ಜಿಲ್ಲಾ ನ್ಯಾಯಾಧೀಶಕರು |
| 5 | ಗದಗ | ಜಿ.ಕೆ. ಹಿರೇಮಠ್ | 9448867281 | ನಿವೃತ್ತ ಸಹಾಯಕ ಆಯುಕ್ತರು, ದಕ್ಷಿಣ ಮತ್ತು ಪಶ್ಚಿಮ ರೈಲ್ವೆ ವಲಯ. |
| 6 | ಹಾವೇರಿ | ಎಸ್.ಸಿ.ಮತ್ತೀಹಳ್ಳಿ | 9448980077 | ನಿವೃತ್ತ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ |
| 7 | ಶಿವಮೊಗ್ಗ | ಹೆಚ್. ವೆಂಕಟೇಶ್ | 9480416999 | ನಿವೃತ್ತ ಡಿಜಿಎಮ್. ಬಿಎಸ್‌ಎನ್‌ಎಲ್ |
| 8 | ಚಿಕ್ಕಬಳ್ಳಾಪುರ | ಎಸ್.".ರಾಘವೇಂದ್ರರಾವ್ | 9844116369 | ನಿವೃತ್ತ ಡಿಜಿಎಮ್. ಎಸ್‌ಬಿಎಮ್. |
| 9 | ಬೆಂಗಳೂರು(ಗ್ರಾ) | ಸಿ.ಬಿ. ಶಿವಣ್ಣ | 9480853109 | ನಿವೃತ್ತ ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ |
| 10 | ಬೆಂಗಳೂರು(ನ) | ಹೊಸೂರು .ಕೆ.ಜಿ. | 7259524177 | ನಿವೃತ್ತ ಜಿಲ್ಲಾ ನ್ಯಾಯಾಧೀಶರು |
| 11 | ಚಾಮರಾಜನಗರ | ಪುಟ್ಟರಾಜು.ಎನ್. | 9480166430 | ನಿವೃತ್ತ ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ. |
| 12 | ಚಿತ್ರದುರ್ಗ | ಗೋಂ"ದರೆಡ್ಡಿ | 9449830933 | ನಿವೃತ್ತ ಜಂಟಿ ನಿರ್ದೇಶಕರು, ಸಿ&ಐ |
| 13 | ಉಡುಪಿ | ಬಸ್ರೂರು ರಾಜೀವ್ ಶೆಟ್ಟಿ | 9844045105 | ನಿವೃತ್ತ ಸಹಾಯಕ ವ್ಯವಸ್ಥಾಪಕರು, ವಿಜಯ ಬ್ಯಾಂಕ್ |
| 14 | ಬಾಗಲಕೋಟೆ | ಚಾನಲ್ .ಬಿ.ಟಿ | 9845885203 | ನಿವೃತ್ತ ಜಿಲ್ಲಾ ನ್ಯಾಯಾಧೀಶರು |
| 15 | ಯಾದಗಿರಿ | ಶಂಬಾಜಿ ಎಸ್.ತಿಲೆ | 9448829955 | ನಿವೃತ್ತ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ |
| 16 | ದಾವಣಗೆರೆ | ಬಸವರಾಜ್ ಎಂ. | 9449497267 | ನಿವೃತ್ತ ಉಪನ್ಯಾಸಕರು ಸರ್ಕಾರಿ ಪದವಿ ಪೂರ್ವ ಕಾಲೇಜು |
| 17 | ರಾಮನಗರ | ಈಶ್ವರಯ್ಯ.ಆರ್.". | 9480875353 | ನಿವೃತ್ತ ವ್ಯವಸ್ಥಾಪಕ ನಿರ್ದೇಶಕರು, ಟೆಕ್ಸ್ಟ್ ಬುಕ್ ಸೊಸೈಟಿ. |
| 18 | ಮೈಸೂರು | ಡಾ॥.ಎಸ್.ಪಿ.ರಘುನಾಥ್. | 9741018601 | ನಿವೃತ್ತ ಮುಖ್ಯ ಅಭಿಯಂತರರು |
| 19 | ಉತ್ತರಕನ್ನಡ | ಮಧುಕರ ಗಡಕರ | 9449069565 | ನಿವೃತ್ತ ಆಯುಕ್ತರು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ |
| ಡೆಪ್ಯೂಟಿ ಓಂಬುಡ್ಸ್‌ಮನ್ | | | | |
| 1 | ಮೈಸೂರು | ರತ್ನಾನಾಯಕ್ | – | ನಿವೃತ್ತ ಜಂಟಿ ನಿರ್ದೇಶಕರು, ಸಹಕಾರ ಲೆಕ್ಕಪರಿಶೋಧನಾ ಇಲಾಖೆ. |




# ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಘೋಷಣೆ

– ಚಂದ್ರಶೇಖರ್ ಎಂ. ಮಸಗುಪ್ಪಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಪಂಚಾಯತ್ ರಾಜ್ಯ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯಿತಿಗಳನ್ನು ಮಾತ್ರ ಅನುಷ್ಠಾನ ಸಂಸ್ಥೆಗಳನ್ನಾಗಿ (Implementing agencies) ಕಾಮಗಾರಿಗಳ ಅನುಷ್ಠಾನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸದರಿ ಸಂಸ್ಥೆಗಳ ಮೂಲಕ ಕಾಮಗಾರಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೆ, ಅನುಷ್ಠಾನ ಇಲಾಖೆಗಳಿಗೆ ಮತ್ತು ಪ್ರಸಿದ್ಧ ಸರ್ಕಾರೇತರ ಸಂಸ್ಥೆಗಳಿಗೂ ಸಹ ಯೋಜನೆಯ ಅನುಷ್ಠಾನದಲ್ಲಿ ಅನುಷ್ಠಾನ ಸಂಸ್ಥೆಗಳನ್ನಾಗಿ ಕಾರ್ಯನಿರ್ವಹಿಸಲು ಯೋಜನೆಯ ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಿದೆ. ಈವರೆವಿಗೂ, ಅನುಷ್ಠಾನ ಇಲಾಖೆಗಳು, ಪಂಚಾಯತ್ ರಾಜ್ ಸಂಸ್ಥೆಗಳಿಗೆ, ಕಾಮಗಾರಿಗಳ ಅನುಷ್ಠಾನದಲ್ಲಿ ತಾಂತ್ರಿಕ ನೆರವನ್ನು ನೀಡಿ, ಸಮನ್ವಯತೆಯನ್ನು ಮಾಡುತ್ತಿವೆ. ಯೋಜನೆಯ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಚಟುವಟಿಕೆಗಳನ್ನು ಕೂಡ ಕಾರ್ಯಗತಗೊಳಿಸಲಾಗುತ್ತಿದ್ದು, ಸದರಿ ಚಟುವಟಿಕೆಗಳ ಅನುಷ್ಠಾನವನ್ನು ಸಂಬಂಧಪಟ್ಟ ಇಲಾಖೆ ಅನುಷ್ಠಾನಾಧಿಕಾರಿಗಳೇ ನಿರ್ವಹಿಸಲು ಕ್ರಮಕೈಗೊಳ್ಳಲಾಗಿದೆ. ಆದರೆ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ ಯಾವುದೇ ಇಲಾಖೆಯನ್ನು ಸ್ವತಂತ್ರವಾಗಿ ಯೋಜನೆಯಡಿ ಅನುಷ್ಠಾನ ಸಂಸ್ಥೆ ಎಂದು ಪರಿಗಣಿಸಿರುವುದಿಲ್ಲ. ಪಂಚಾಯತ್ ರಾಜ್ ಸಂಸ್ಥೆಗಳ ವ್ಯವಸ್ಥೆಯಲ್ಲಿ ಯೋಜನೆಯಡಿ ಉದ್ಯೋಗಕ್ಕಾಗಿ ಸಲ್ಲಿಸುವ ಬೇಡಿಕೆ ಆಧಾರದ ಮೇಲೆ ಅನುಮೋದಿತ ಕಾರ್ಯಗಾರಿ ಗುಚ್ಛದಂತೆ ಮಾರ್ಗಸೂಚಿಗಳನ್ವಯ ಆದ್ಯತಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಹಾಗೂ ಸದರಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತ್‌ಗಳು ಸೂಕ್ತ ಕಾಮಗಾರಿ ಆದೇಶ ಮತ್ತು ಓಖಿಗಳನ್ನು ಅನುಷ್ಠಾನಗೊಳಿಸುವ ಇಲಾಖಾ ಅಧಿಕಾರಿಗಳಿಗೆ ನೀಡುತ್ತಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದ ಹಣಪಾವತಿಯನ್ನು ಕೂಡ ಗ್ರಾಮ ಪಂಚಾಯತ್‌ಗಳ ಮೂಲಕವೇ ಮಾಡಲಾಗುತ್ತಿದೆ. ಇದರಿಂದಾಗಿ ಯೋಜನೆಯ ಅನುಷ್ಠಾನದಲ್ಲಿ ಕಾಲವಿಳಂಬವಾಗುತ್ತಿದ್ದು, ಅನುಷ್ಠಾನ ಇಲಾಖೆಗಳು ಅನೇಕ ತೊಂದರೆಗಳನ್ನು ಅನುಭವಿಸುವುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಪರಿಗಣನೆಗೆ ತೆಗೆದುಕೊಂಡು, ಪ್ರಾರಂಭದ ಹಂತದಲ್ಲಿ ಅರಣ್ಯ ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕ ಆಧಾರದ ಮೇಲೆ 13 ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಗಳನ್ನಾಗಿ ಘೋಷಿಸಿತ್ತು. ಕ್ರಮೇಣ ಜಲಾನಯನ ಅಭಿವೃದ್ಧಿ ಮತ್ತು ಜಲಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆಗಳನ್ನು ಅದೇ ಆಧಾರದ ಮೇಲೆ ಹಂತ ಹಂತವಾಗಿ ಮಾಡಲಾಗಿತ್ತು.

ಯೋಜನೆಯ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಚಟುವಟಿಕೆಗಳನ್ನು ಕೂಡ ಕಾರ್ಯಗತ–ಗೊಳಿಸಲಾಗುತ್ತಿದ್ದು, ಸದರಿ ಚಟುವಟಿಕೆಗಳ ಅನುಷ್ಠಾನವನ್ನು ಸಂಬಂಧಪಟ್ಟ ಇಲಾಖೆ ಅನುಷ್ಠಾನಾಧಿಕಾರಿಗಳೇ ನಿರ್ವಹಿಸಲು ಕ್ರಮಕೈಗೊಳ್ಳಲಾಗಿದೆ.

ಆದರೆ ಗ್ರಾಮ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊರತು ಯಾವುದೇ ಇತರ ಇಲಾಖೆ ಸ್ವತಂತ್ರವಾಗಿ ಅನುಷ್ಠಾನ ಸಂಸ್ಥೆಯಾಗುವುದಿಲ್ಲ.

ಜಂಟಿ ನಿರ್ದೇಶಕರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಅರಣ್ಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಾಗೂ ಸರ್ಕಾರದ ಪ್ರಧಾನಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ, ಸರ್ಕಾರದ ಪ್ರಧಾನಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಇವರುಗಳ ಸಮ್ಮುಖದಲ್ಲಿ ದಿನಾಂಕ:03-04-2012ರಂದು ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ತೀರ್ಮಾನಿಸಿದಂತೆ MGNREGSಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಎಲ್ಲಾ ಅನುಷ್ಠಾನ ಇಲಾಖೆಗಳನ್ನು ಯೋಜನೆಯ ಅನುಷ್ಠಾನದ ಪ್ರಗತಿಯ ಹಿತದೃಷ್ಟಿಯಿಂದ, ಕಾಲವಿಳಂಬನೆ ಆಗುವುದನ್ನು ತಡೆಗಟ್ಟಲು ಹಾಗೂ ಸುಲಲಿತವಾಗಿ ಅನುದಾನವನ್ನು ಅನುಷ್ಠಾನ ಸಂಸ್ಥೆಗಳು ಪಡೆಯುವುದಕ್ಕಾಗಿ ಅನುಷ್ಠಾನ ಸಂಸ್ಥೆಗಳೆಂದು ಘೋಷಿಸಲಾಗಿದೆ. ಒಟ್ಟು ಎಂಟು ಇಲಾಖೆಗಳಾದ, ಅರಣ್ಯ ತೋಟಗಾರಿಕೆ, ಕೃಷಿ, ಜಲಾನಯನ ಅಭಿವೃದ್ಧಿ, ಜಲಸಂಪನ್ಮೂಲ (ಸಣ್ಣ ನೀರಾವರಿ), ರೇಷ್ಮೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇವುಗಳನ್ನು ಪ್ರಸ್ತುತ ಅನುಷ್ಠಾನ ಸಂಸ್ಥೆಗಳನ್ನಾಗಿ ಸರ್ಕಾರವು ದಿನಾಂಕ:18-09-2012ರಂದು ಆದೇಶವನ್ನು ಕೆಲ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಹೊರಡಿಸಿದೆ. ಪಂಚಾಯತ್ ರಾಜ್ ಸಂಸ್ಥೆಗಳು ನಿರ್ವಹಿಸುವ ರೀತಿಯಲ್ಲಿ ಅನುಷ್ಠಾನ ಸಂಸ್ಥೆಗಳು ಕಾರ್ಯನಿರ್ವಹಿಸಬಹುದಾಗಿರುತ್ತದೆ.

ಅನುಷ್ಠಾನ ಸಂಸ್ಥೆಗಳನ್ನು ಗುರುತಿಸಿದ ಹಿನ್ನೆಲೆಯಲ್ಲಿ 2012-13ನೇ ಸಾಲಿನಲ್ಲಿ, ಕೇಂದ್ರ ಸರ್ಕಾರವು ಭರವಸೆ ನೀಡಿದಂತೆ, ರೂ.700.00 ಕೋಟಿಗಳಿಗೆ ಸಂಬಂಧಪಟ್ಟ ಅನುಷ್ಠಾನ ಇಲಾಖೆಗಳು ಕ್ರಿಯಾ ಯೋಜನೆಯನ್ನು ಅಂದರೆ, ಕಾಮಗಾರಿಗಳ ಪಟ್ಟಿಯನ್ನು ಮೌಲ್ಯದೊಂದಿಗೆ ತಿಳಿಸಲು ಕೋರಿದ್ದು, ಅದರಂತೆಯೇ, ಅನುಷ್ಠಾನ ಇಲಾಖೆಗಳು ನೀಡಿದ್ದು, ಲಭ್ಯವಿರುವ ಅನುದಾನದಲ್ಲಿಯೇ, ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ. 2013-14ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಅನುಮೋದಿಸಲಾದ ಅನುದಾನದಲ್ಲಿ ಕೊಂಚ ಭಾಗವನ್ನು ಅನುಷ್ಠಾನ ಇಲಾಖೆಗಳಿಗೆ ಮೀಸಲಿರಿಸಿ, ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಅನುಷ್ಠಾನ ಇಲಾಖೆಗಳು MGNREGS ಕಾರ್ಯಕ್ರಮದಲ್ಲಿ ಪಾಲ್ಗೊಳ್ಳು ವಿಕೆಯಿಂದ ಯೋಜನೆಯ ಅನುಷ್ಠಾನದಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುವುದಲ್ಲದೇ, ಉದ್ಯೋಗ ದಿನಗಳನ್ನು ಸೃಜಿಸಿ, ಉದ್ಯೋಗವನ್ನು ಒದಗಿಸಿ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸಿದಂತಾಗುವುದು. ಅನುಷ್ಠಾನ ಸಂಸ್ಥೆಗಳನ್ನು ಗುರುತಿಸಿದ ಹಿನ್ನೆಲೆಯಲ್ಲಿ ಪ್ರಮುಖವಾಗಿ ಈ ಕೆಳಗಿನಂತೆ ಸೂಚನೆಗಳನ್ನು ನೀಡಲಾಗಿದೆ.

1. ಇತರೆ ಯೋಜನೆಯ ಕಾರ್ಯಕ್ರಮಗಳನ್ನು MGNREGS ಯೋಜನೆಯೊಂದಿಗೆ ಒಗ್ಗೂಡಿಸಿ, ಅನುಷ್ಠಾನಗೊಳಿಸುವ ಸಂಬಂಧ ಹೆಚ್ಚಿನ ಒತ್ತುಕೊಟ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

2. ಅಕುಶಲ ಕೂಲಿ ಕಾರ್ಮಿಕರ ಕೂಲಿ ಪಾವತಿಯನ್ನು ಕಡ್ಡಾಯವಾಗಿ e-FMS ವ್ಯವಸ್ಥೆಯ ಮೂಲಕವೇ ಮಾಡುವುದು.

3. ಯಾವುದೇ ಕಾಮಗಾರಿಗಳನ್ನು ಒಖಖ ಮಾಡದೇ ಹಣವನ್ನು ಪಾವತಿಸುವಂತಿಲ್ಲ.

4. e-FMS ವ್ಯವಸ್ಥೆಯ ಮೂಲಕ ಕೂಲಿಕಾರರಿಗೆ ಕೂಲಿ ಸಂದಾಯ ಮಾಡಲು ಜಿಲ್ಲಾ ಮಟ್ಟದಲ್ಲಿ ಖಃಒ ಬ್ಯಾಂಕ್‌ನಲ್ಲಿ e-FMS ಬ್ಯಾಂಕ್ ಖಾತೆಯನ್ನು ತೆರೆಯಬೇಕು. ಈ ಖಾತೆಗೆ 60% ಕೂಲಿ ಹಣವನ್ನು ಈ ಖಾತೆಗೆ ವರ್ಗಾಯಿಸಬೇಕು.

5. e-FMS ವ್ಯವಸ್ಥೆ ಮೂಲಕ ಹಣ ಪಾವತಿಸಲು, ಹಣ ಸಂದಾಯ ಮಾಡುವ ಅನುಷ್ಠಾನ ಸಂಸ್ಥೆಯ ಅನುಷ್ಠಾನ ಅಧಿಕಾರಿಯ DSಅನ್ನು NIC ಇವರು ವಿನ್ಯಾಸಗೊಳಿಸಿದ ನಮೂನೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇವರ ಮೇಲುರುಜುವಾತಿಯೊಂದಿಗೆ MGNREGS ಯೋಜನೆಯ ನಿರ್ದೇಶನಾಲಯದ ಮುಂದಿನ ಕ್ರಮಕ್ಕೆ ಸಲ್ಲಿಸುವುದು.

6. MIS ಪ್ರಕಾರ ಕೈಗೊಂಡಿರುವ ಪ್ರತಿ ಕಾಮಗಾರಿಗೆ ಪ್ರತ್ಯೇಕವಾದ ಕಡತವನ್ನು ನಿರ್ವಹಿಸುವುದು.

7. ಕಾಮಗಾರಿಗಳ ಅನುಷ್ಠಾನದ ಮೂರು ಹಂತದ ಛಾಯಾ ಚಿತ್ರಗಳನ್ನು MISನಲ್ಲಿ ದಾಖಲಿಸುವುದು.

ಯೋಜನೆಯಡಿ ಇತರೆ ಇಲಾಖೆಗಳ ಕಾರ್ಯಕ್ರಮಗಳ ಸಂಪನ್ಮೂಲ ನಿಧಿಗಳ ಒಗ್ಗೂಡಿಸುವಿಕೆ

ಬಹುಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜನೆ ಮಾಡಲು, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ನಿಧಿಯೊಂದಿಗೆ ಇತರೆ ಇಲಾಖೆಗಳ ಯೋಜನೆಗಳ ಸಂಪನ್ಮೂಲ ನಿಧಿಗಳನ್ನು ಒಗ್ಗೂಡಿಸಿ ಅನುಷ್ಠಾನಗೊಳಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಿದೆ. ಪ್ರಾರಂಭದಲ್ಲಿ, ಕೇಂದ್ರ ಸರ್ಕಾರವು 9 ಪ್ರವರ್ಗದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮತಿಸಿದ್ದು, ಈ ಎಲ್ಲಾ ಕಾಮಗಾರಿಗಳು ಬಹುತೇಕ, ನೀರು ಮತ್ತು ಮಣ್ಣು ಸಂರಕ್ಷಣೆ, ಅರಣ್ಯೀಕರಣದ ಚಟುವಟಿಕೆಗಳು, ನೀರಾವರಿ, ಮಳೆ ನೀರು ಕೊಯ್ಲಿನ ವಿನ್ಯಾಸಗಳು, ಬರವನ್ನು ನೀಗಿಸುವ ಹಾಗೂ ಅಂತರ್‌ಜಲವನ್ನು ಹೆಚ್ಚಿಸುವುದಾಗಿರುತ್ತದೆ. ಸದರಿ ಯೋಜನೆಯಡಿ, ರಸ್ತೆ ನಿರ್ಮಾಣದ ಕಾಮಗಾರಿಗಳನ್ನು ಹೊರತುಪಡಿಸಿದರೆ, ಕಟ್ಟಡ ಕಾಮಗಾರಿಗಳನ್ನು ಹೆಚ್ಚಾಗಿ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ರಸ್ತೆ ಕಾಮಗಾರಿಗಳನ್ನು ಈ ಯೋಜನೆಯಡಿ ಕಡಿಮೆ ಆದ್ಯತೆ ಪ್ರವರ್ಗವೆಂದು ಪರಿಗಣಿಸಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೊಜನೆಯಡಿ, ಪಂಚಾಯತ್ ರಾಜ್ ಸಂಸ್ಥೆಗಳಲ್ಲದೇ ಅನುಷ್ಠಾನ ಇಲಾಖೆಗಳು ಸಕ್ರಿಯವಾಗಿ ಭಾಗವಹಿಸುತ್ತಿವೆ. ಶೇಕಡಾ 100 ರಷ್ಟು ಅನುದಾನವನ್ನು ಒದಗಿಸುವ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಿಗೆ ಅನುಷ್ಠಾನ ಇಲಾಖೆಗಳೂ ಕೂಡ ಪಂಚಾಯತ್ ರಾಜ್ ಸಂಸ್ಥೆಗಳೊಂದಿಗೆ ಸಮನ್ವಯತೆಗಾಗಿ ಪರಸ್ಪರ ಕೆಲಸ ನಿರ್ವಹಿಸುತ್ತಿವೆ. ಅಲ್ಲದೇ, ಅನುಷ್ಠಾನ ಇಲಾಖೆಗಳಿಗೆ ತಮ್ಮ ಇಲಾಖೆಯ ಕಾಮಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಹಾಗೂ ಬಾಳಿಕೆ ಬರುವ ಆಸ್ಥಿಗಳನ್ನು ನಿರ್ಮಾಣಮಾಡಲು ಅನುದಾನ ಕೊರತೆ ಇರುವುದರಿಂದ, ಇಂತಹ ಸಂದರ್ಭದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ನಿಧಿಯೊಂದಿಗೆ ತಮ್ಮ ಇಲಾಖೆಯ ಕಾರ್ಯಕ್ರಮಗಳಿಗೆ ಒದಗಿಸಲಾದ ಅನುದಾನವನ್ನು ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನ ಗೊಳಿಸಬಹುದಾಗಿರುತ್ತದೆ. ಇಂತಹ ಒಗ್ಗೂಡಿಸುವಿಕೆಯಿಂದ ಎಷ್ಟು ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಳ್ಳಬಹುದು ಎಂಬುದರ ಕುರಿತು ಪಟ್ಟಿಮಾಡಿ, ಅವುಗಳಿಗೆ ಆರ್ಥಿಕ ಸಾಲಿನಲ್ಲಿ ಅನುದಾನವನ್ನು ಇಲಾಖೆಯ ಆಯವ್ಯಯದಲ್ಲಿ ಅನುಷ್ಠಾನ ಇಲಾಖೆಗಳು ಅಳವಡಿಸಿಕೊಳ್ಳಬೇಕಾಗಿರುತ್ತದೆ. ಒಗ್ಗೂಡಿಸುವಿಕೆಯ ಮೂಲಕ, ಬಹುಕಾಲ ಬಾಳಿಕೆ ಬರುವ ಆಸ್ತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮ ಪಂಚಾಯತ್‌ಗಳಲ್ಲಿ ಸೃಜಿಸಬಹುದಾಗಿರುತ್ತದೆ. ಒಗ್ಗೂಡಿಸುವಿಕೆಯು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಗೆ ಮತ್ತು ಇತರೆ ಅನುಷ್ಠಾನ ಇಲಾಖೆಗಳಿಗೆ ಸೇತುವೆಯಂತಹ ಸಂಪರ್ಕವನ್ನು ಕಲ್ಪಿಸಲು ಬಹುಮುಖ್ಯವಾದ ಪಾತ್ರವಹಿಸುತ್ತದೆ.

ಕೇಂದ್ರ ಸರ್ಕಾರವು ಈ ನಿಟ್ಟಿನಲ್ಲಿ ಒಗ್ಗೂಡಿಸುವಿಕೆಯನ್ನು ಮತ್ತು ಯೋಜನೆಯಲ್ಲಿ ಹಾಲಿ ಅನುಮತಿಸಲಾದ ಕಾಮಗಾರಿಗಳನ್ನು ಮತ್ತಷ್ಟು ಬಲಪಡಿಸಲು 9 ಪ್ರವರ್ಗಗಳ ಕಾಮಗಾರಿಗಳಿಂದ 16 ಪ್ರವರ್ಗದ ಕಾಮಗಾರಿಗಳಿಗೆ ಹೆಚ್ಚಿಸಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಮತ್ತು ಒಗ್ಗೂಡಿಸುವಿಕೆಯ ಕಾಮಗಾರಿಗಳನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸುವುದಾದರೆ ಗ್ರಾಮ ಪಂಚಾಯತಿಗಳಲ್ಲಿ ಯಾವುದೇ ಮೂಲ ಭೂತ ಸೌಕರ್ಯಗಳ ಕೊರತೆ ಇಲ್ಲದಂತೆ ಅಭಿವೃದ್ಧಿ ಪಡಿಸಬಹುದಾಗಿರುತ್ತದೆ. ಒಗ್ಗೂಡಿಸುವಿಕೆಯು ಅನುಷ್ಠಾನದಲ್ಲಿ ಕೂಲಿ ಮತ್ತು ಸಾಮಗ್ರಿಗಳ 60:40 ರ ಅನುಪಾತವನ್ನು ಕಡ್ಡಾಯವಾಗಿ ಪಾಲಿಸಬೇಕು. ಯೋಜನೆಯ ಮಾರ್ಗಸೂಚಿಗಳ ಅನುಸಾರ

ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕು. ಕೇಂದ್ರ ಸರ್ಕಾರವು ಹೆಚ್ಚಿಸಿರುವ 16 ಪ್ರವರ್ಗಗಳ ಕಾಮಗಾರಿಗಳ ವಿವರಗಳು ಈ ಕೆಳಕಂಡತಿವೆ.

1. ಕಾಲುವೆಗಳು, ಸಮಪಾತಳಿ ಕಂದಕಗಳು (contour trenches), ಹೊದರುಕಡ್ಡಿಯ ರಚನೆ (gabion structures) ಭೂಗರ್ಭ ಹುದುಗಿಸಲ್ಪಟ್ಟ ತೋಡುಗಳು, ಮಣ್ಣಿನ ಆಣೆಕಟ್ಟುಗಳು, ತಡೆಕಟ್ಟೆಗಳು, ಸ್ಪ್ರಿಂಗ್‌ಶೆಡ್‌ಗಳನ್ನು ಒಳಗೊಂಡಂತೆ ಜಲ ಸಂರಕ್ಷಣೆ ಹಾಗೂ ನೀರು ಕೊಯ್ಲು.

2. ಅರಣ್ಯೀಕರಣ ಮತ್ತು ನೆಡುತೋಪುಗಳನ್ನೊಳ ಗೊಂಡಂತೆ ಬರ ತಡೆಯುವಿಕೆ ಕಾಮಗಾರಿಗಳು.

3. ಸೂಕ್ಷ್ಮ ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ ನೀರಾವರಿ ಕಾಲುವೆಗಳು.

4. ನೀರಾವರಿ ಸೌಲಭ್ಯ ಒದಗಿಸುವುದು, ಕೃಷಿ ಹೊಂಡಗಳನ್ನು ನಿರ್ಮಿಸುವುದು, ತೋಟಗಾರಿಕೆ, ಬದುಗಳಲ್ಲಿ ನೆಡುತೋಪು, ಪ್ಯಾರಾಗ್ರಾಫ್ 1ಸಿ ರಲ್ಲಿ ಸೂಚಿಸಿರುವಂತೆ ಭೂಮಿ ಹೊಂದಿರುವ ಕುಟುಂಬಗಳ ಭೂ ಅಭಿವೃದ್ಧಿ ಕಾಮಗಾರಿ.

5. ಕೆರೆಗಳ ಹೂಳೆತ್ತುವುದು ಸೇರಿದಂತೆ, ಸಾಂಪ್ರದಾಯಿಕ ಜಲಸಂಚಯಗಳ ಪುನಶ್ಚೇತನ ಗೊಳಿಸುವ ಕಾಮಗಾರಿಗಳು.

6. ಭೂ ಅಭಿವೃದ್ಧಿ.

7. ಜವಳು (water logged) ಪ್ರದೇಶಗಳಲ್ಲಿ ತೋಡುಗಳು, ಪ್ರವಾಹ ನಿಯಂತ್ರಣ ಕಾಲುವೆಗಳನ್ನು ಆಳಗೊಳಿಸುವುದು, ದುರಸ್ತಿ, ಪ್ರವಾಹ ಕಾಲುವೆಗಳ ನಿರ್ಮಾಣ ಒಳಗೊಂಡ ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣಾ ಕಾಮಗಾರಿಗಳು.

8. ಗ್ರಾಮದಲ್ಲಿ ಸರ್ವಋತು ಉಪಯೋಗಕ್ಕೆ ಪೂರಕವಾದ ಅಡಿಗಾಲುವೆ ಮತ್ತು ರಸ್ತೆಗಳನ್ನು ನಿರ್ಮಿಸಿ ಗ್ರಾಮೀಣ ಸಂಪರ್ಕ ಕಲ್ಪಿಸುವುದು.

9. ಭಾರತ್ ನಿರ್ಮಾಣ ರಾಜೀವ್ ಗಾಂಧಿ ಸೇವಾ ಕೇಂದ್ರವನ್ನು ತಾಲ್ಲೂಕು ಮಟ್ಟದಲ್ಲಿ ಜ್ಞಾನ ಸಂಪನ್ಮೂಲ ಕೇಂದ್ರವನ್ನಾಗಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಭವನವನ್ನಾಗಿ ನಿರ್ಮಿಸುವುದು.

10. ಎನ್.ಎ.ಡಿ.ಇ.ಪಿ ಮಿಶ್ರಗೊಬ್ಬರ, ಎರೆಹುಳು ಗೊಬ್ಬರ, ದ್ರವ್ಯ–ಜೈವಿಕ ಗೊಬ್ಬರ ತಯಾರಿಸುವಂತಹ ಕೃಷಿ ಆಧಾರಿತ ಚಟುವಟಿಕೆಗಳು.

11. ಜಾನುವಾರುಗಳ ಹಾಗೂ ಕುಕ್ಕಟ ಸಾಕಾಣಿಕೆಗೆ ಸಂಬಂಧಿಸಿದಂತೆ ಕೋಳಿ ಸಾಕಾಣಿಕಾ ಶೆಡ್ಡು, ಮೇಕೆ ಸಾಕಾಣಿಕಾ ಶೆಡ್ಡು, ಕಚ್ಚಾ ನೆಲ, ಗಂಜಲ ಸಂಗ್ರಹಾಗಾರ ಮತ್ತು ಜಾನುವಾರುಗಳ ಮೇವು ತೊಟ್ಟಿಗಳನ್ನು ನಿರ್ಮಿಸುವುದು, ಜಾನುವಾರು ಮೇವಿಗಾಗಿ ಆಜೋಲ್ ಪೂರಕ ಕಾಮಗಾರಿಗಳು.

12. ಸಾರ್ವಜನಿಕ ಜಾಗದಲ್ಲಿ ಋತುಮಾನ ಆಧಾರಿತ ಮೀನುಗಾರಿಕೆಗೆ ಜಲಾಗಾರಗಳನ್ನು ನಿರ್ಮಿಸುವುದು.

13. ಕರಾವಳಿ ಪ್ರದೇಶದಲ್ಲಿ ಮೀನು ಒಣಗು ಕಟ್ಟೆಗಳು, ಕಡಲ ತೀರ ಸಸ್ಯ ವಲಯಗಳ ನಿರ್ಮಾಣದಂತಹ ಕಾಮಗಾರಿಗಳು.

14. ನೆನೆಸು ಹೊಂಡಗಳು, ಮರುಪೂರ್ಣ ಕಾಮಗಾರಿಗಳು ನಿರ್ಮಿಸುವಂತಹ ಗ್ರಾಮೀಣ ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳು.

15. ಮನೆಗಳಲ್ಲಿ ವೈಯಕ್ತಿಕ ಶೌಚಾಲಯ, ಶಾಲೆ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯಗಳು, ಘನ ಮತ್ತು ದ್ರವ್ಯ ತ್ಯಾಜ್ಯ ವಸ್ತುಗಳ ನಿರ್ವಹಣೆ, ಗ್ರಾಮೀಣ ಸ್ವಚ್ಛತೆಗೆ ಸಂಬಂಧಿಸಿದ ಕಾಮಗಾರಿಗಳು.

16. ರಾಜ್ಯ ಸರ್ಕಾರದ ಸಮಾಲೋಚನೆಯೊಂದಿಗೆ ಕೇಂದ್ರ ಸರ್ಕಾರವು ಪ್ರಕಟಿಸಬಹುದಾದ ಇನ್ನಿತರೆ ಕಾಮಗಾರಿಗಳು.

ಒಗ್ಗೂಡಿಸುವಿಕೆಯ ಸಂಬಂಧ, ರಾಜ್ಯ ಸರ್ಕಾರವು ಸವಿಸ್ತಾರವಾಗಿ ಒಂದು ಸುತ್ತೋಲೆಯನ್ನು ದಿನಾಂಕ: 21–07–2012 ರಂದು ಹೊರಡಿಸಿದೆ.




# ಭಾರತ್ ನಿರ್ಮಾಣ ರಾಜೀವ್ ಗಾಂಧಿ ಸೇವಾ ಕೇಂದ್ರ

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಾಲಯವು ಭಾರತ್ ನಿರ್ಮಾಣ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಗ್ರಾಮಗಳ ಮಟ್ಟದಲ್ಲಿ ಹಾಗೂ ಬ್ಲಾಕ್ ಮಟ್ಟದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನಿರ್ಮಿಸಲು ಅವಕಾಶ ಕಲ್ಪಿಸಿದ್ದು, ಇದು 2009–10ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ಸದರಿ ಕೇಂದ್ರಗಳನ್ನು ಗ್ರಾಮ ಪಂಚಾಯತಿಗಳಲ್ಲಿ ನಿರ್ಮಿಸುವುದಾದರೆ 130 ಚ.ಮೀ. ವಿಸ್ತೀರ್ಣದಲ್ಲಿ ರೂ.10 ಲಕ್ಷಗಳ ಮತ್ತು ಬ್ಲಾಕ್ ಮಟ್ಟದಲ್ಲಾದರೆ 290 ಚ.ಮೀ ವಿಸ್ತೀರ್ಣದಲ್ಲಿ ರೂ.25 ಲಕ್ಷಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಯ ಅನುದಾನದಿಂದ ಬಳಸಬಹುದಾಗಿರುತ್ತದೆ. ಸದರಿ ಸೇವಾ ಕೇಂದ್ರ ನಿರ್ಮಾಣದ ವೆಚ್ಚದಲ್ಲಿ ಕೂಲಿ ಮತ್ತು ಸಾಮಗ್ರಿ ಬಾಬ್ತಿನ 60:40ರ ಅನುಪಾತವನ್ನು ಕಾಯ್ದುಕೊಳ್ಳಬೇಕಾಗಿರುತ್ತದೆ. ಇದರ ನಿರ್ಮಾಣದಲ್ಲಿ ಸಾಮಗ್ರಿ ಭಾಗ ಹೆಚ್ಚಾದಲ್ಲಿ, ಹೆಚ್ಚಾದ ಮೊತ್ತವನ್ನು ಶೇ. 6ರಷ್ಟಿನ ಆಡಳಿತಾತ್ಮಕ ವೆಚ್ಚದಿಂದ ಭರಿಸಬಹುದಾಗಿರುತ್ತದೆ. ನಿರ್ಮಾಣವಾದ ಸೇವ ಕೇಂದ್ರಗಳಲ್ಲಿ ICT ಸೌಲಭ್ಯಗಳನ್ನು ಒದಗಿಸುವ ಸಂಬಂಧ ಆಗುವ ವೆಚ್ಚವನ್ನು ಯೋಜನೆಯ ಶೇಕಡಾ 6ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸಬಹುದಾಗಿರುತ್ತದೆ.

> ಭಾರತ್ ನಿರ್ಮಾಣ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾರ್ಯಚಟುವಟಿಕೆಗಳಿಗಾಗಿ ಮತ್ತು ಬ್ಲಾಕ್ ಮಟ್ಟದಲ್ಲಿ ಜ್ಞಾನ ಸಂಪನ್ಮೂಲ ಕೇಂದ್ರವಾಗಿ ಬಳಸಬಹುದಾಗಿದೆ.

ಭಾರತ್ ನಿರ್ಮಾಣ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾರ್ಯಚಟುವಟಿಕೆಗಳಿಗಾಗಿ ಮತ್ತು ಬ್ಲಾಕ್ ಮಟ್ಟದಲ್ಲಿ ಜ್ಞಾನ ಸಂಪನ್ಮೂಲ ಕೇಂದ್ರವಾಗಿ ಬಳಸಬಹುದಾಗಿದೆ. ಈ ಕೇಂದ್ರಗಳನ್ನು ಇದಲ್ಲದೇ, ಬೇರಾವುದೇ ಉದ್ದೇಶಗಳಿಗಾಗಿ ಬಳಸಲು ಮಾರ್ಗಸೂಚಿಗಳಲ್ಲಿ ಅವಕಾಶವಿರುವುದಿಲ್ಲ. ಹಾಗಾಗಿ ಗ್ರಾಮ ಮಟ್ಟದ ಈ ಸೇವಾ ಕೇಂದ್ರಗಳಲ್ಲಿ ನರೇಗಾ ಯೋಜನೆಗೆ ಸಂಬಂಧಿಸಿದ ಉದ್ಯೋಗ ಚೀಟಿಗಾಗಿ ಅರ್ಜಿ ಸಲ್ಲಿಸುವ, ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸುವ, ಹಾಜರಾತಿ ಪಟ್ಟಿ ಪರಿಶೀಲಿಸುವ, ದೂರುಗಳನ್ನು ಸ್ವೀಕರಿಸುವ ಮತ್ತು ಯೋಜನೆಯಡಿ ಕೂಲಿಕಾರರ ಹಕ್ಕುಗಳು ಮತ್ತು ಸೌಲಭ್ಯಗಳ ಮಾಹಿತಿ ಪಡೆಯುವಂತಹ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಬಹುದಾಗಿದೆ. ಅದರಂತೆ, ಬ್ಲಾಕ್ ಮಟ್ಟದ ಸೇವಾ ಕೇಂದ್ರಗಳನ್ನು ಗ್ರಾಮೀಣ ಪ್ರದೇಶಗಳು ಮತ್ತು ಗ್ರಾಮೀಣ ಸಮುದಾಯಗಳಿಗಾಗಿ ಗ್ರಾಮೀಣಾಭಿವೃದ್ಧಿಯ ಯೋಜನೆಗಳ ಒಗ್ಗೂಡಿಕೆಯ ಜೊತೆಗೆ ಇತರೆ ಅಭಿವೃದ್ಧಿ ಕಾರ್ಯಕ್ರಮಗಳ ಒಗ್ಗೂಡಿಕೆಗಾಗಿ ಸೌಲಭ್ಯಗಳನ್ನು ಕಲ್ಪಿಸಲು ಮತ್ತು ತರಬೇತಿ ನೀಡುವ ಉದ್ದೇಶಗಳಿಗಾಗಿ ಬಳಸಬಹುದಾಗಿದೆ.

ಭಾರತ್ ನಿರ್ಮಾಣ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ನಿರ್ಮಾಣ ಕಾರ್ಯಕ್ರಮವನ್ನು 2009–10 ನೇ ಸಾಲಿನಿಂದ ಪ್ರಾರಂಭಿಸಿ, ರಾಜ್ಯದಲ್ಲಿ ಇದುವರೆಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ 1629 ಸೇವಾ ಕೇಂದ್ರಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ. ಅದರಲ್ಲಿ 339 ಕೇಂದ್ರಗಳ ನಿರ್ಮಾಣವು ಭೌತಿಕವಾಗಿ ಪೂರ್ಣಗೊಂಡಿರುತ್ತದೆ. ಇನ್ನುಳಿದವುಗಳ ನಿರ್ಮಾಣವು ವಿವಿಧ ಹಂತ ದಲ್ಲಿರುತ್ತದೆ. ಹಾಗೆಯೇ ಬ್ಲಾಕ್ ಮಟ್ಟದಲ್ಲಿ, 12 ಸೇವಾ ಕೇಂದ್ರಗಳ ನಿರ್ಮಾಣವನ್ನು ಪ್ರಾರಂಭಿಸಿದ್ದು, ಅವುಗಳ ನಿರ್ಮಾಣದ ವಿವಿಧ ಹಂತದಲ್ಲಿರುತ್ತದೆ.




# ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಪಾವತಿ ಬಗೆಗಿನ ಹೊಸ ಹೆಜ್ಜೆ. (e-FMS)

– ಎಂ. ಗೋವಿಂದನ್

ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ( ಇ ಎಫ್ ಎಂ ಎಸ್):– ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ( ಇ ಎಫ್ ಎಂ ಎಸ್) ಯಲ್ಲಿ ಆನ್ ಲೈನ್ ಮುಖಾಂತರ ನೇರವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳ ಖಾತೆಗೆ ಕೂಲಿ ಮೊತ್ತವನ್ನು ಜಮೆ ಮಾಡಲಾಗುತ್ತದೆ. ಇದೊಂದು ಎನ್.ಐ.ಸಿ ಯವರು ಅಭಿವೃದ್ಧಿ ಪಡಿಸಿರುವ ಸ್ವತಂತ್ರ ವ್ಯವಸ್ಥೆಯಾಗಿರುತ್ತದೆ. ಇದರಿಂದ ಆನ್ ಲೈನ್ ಮುಖಾಂತರ ನೇರವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳ ಖಾತೆಗೆ ಕೂಲಿ ಮೊತ್ತವನ್ನು ಜಮೆ ಮಾಡಲಾಗುತ್ತದೆ. ಈ ತಂತ್ರಾಂಶವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಾಗಿಯೇ ಪ್ರತ್ಯೇಖವಾಗಿ ಅಭಿವೃದ್ಧಿ ಪಡಿಸಲಾಗಿದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ತಂತ್ರಾಂಶವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಸಂಗಾತಿ ಬ್ಯಾಂಕಿಂಗ್ ತಂತ್ರಾಂಶದೊಂದಿಗೆ ಸಂಯೋಜಿಸಲ್ಪಟ್ಟಿದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಲ್ಲಿ ಆನ್ ಲೈನ್ ಮುಖಾಂತರ ನೇರವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳ ಖಾತೆಗೆ ಕೂಲಿ ಮೊತ್ತವನ್ನು ನೈಜ ಸಮಯದಲ್ಲಿ ವರ್ಗಾವಣೆ ಮಾಡಲಾಗುತ್ತದೆ.

**e-FMS ವ್ಯವಸ್ಥೆಯಿಂದ ಯೋಜನೆಯಡಿ ನಿಧಿ ನಿರ್ವಹಣೆಯನ್ನು ಖಚಿತ ಹಾಗೂ ಸುಲಭವಾಗಿ ನಿರ್ವಹಿಸಬಹುದಾಗಿರುತ್ತದೆ.**

## ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ( ಇ ಎಫ್ ಎಂ ಎಸ್) ಧ್ಯೇಯಗಳು:

1. ಫಲಾನುಭವಿಗಳ ಖಾತೆಗೆ ಕೂಲಿ ಮೊತ್ತವನ್ನು ನೈಜ ಸಮಯದಲ್ಲಿ ವರ್ಗಾವಣೆ ಮಾಡಲು.
2. ಪಾವತಿಯಲ್ಲಿನ ವಿಳಂಭ ತಪ್ಪಿಸಲು.
3. ಎಲ್ಲಾ ಹಂತದಲ್ಲೂ ನಿಧಿಗಳ ಪಾರ್ಕಿಂಗ್ ತಪ್ಪುತ್ತದೆ.
4. ಮಧ್ಯವರ್ತಿ ಚಟುವಟಿಕೆಗಳನ್ನು ತಪ್ಪಿಸುತ್ತದೆ.
5. ಡಿಜಿಟಲ್ ಸಹಿ ಪ್ರಮಾಣಪತ್ರದ ಮೂಲಕ ಅಧಿಕಾರ ಮತ್ತು ಧೃಡೀಕರಣ.
6. ಕಾಗದ ರಹಿತ ವ್ಯವಹಾರ – ಹಸಿರು ಪರಿಸರ.
7. ಕಡಿಮೆ ಆಡಳಿತ ವೆಚ್ಚ.
8. ಇ–ಆಡಳಿತ ಅನುಷ್ಠಾನದ ಉಪಕ್ರಮ.
9. ದಕ್ಷತೆಯಲ್ಲಿ ಹೆಚ್ಚಳ.
10. ಸರಳೀಕೃತ ಲೆಕ್ಕ ಪತ್ರ ನಿರ್ವಹಣೆ.
11. ಲೆಕ್ಕ ತನಿಖಾ ಹಾಗೂ ಹಣ ಬಳಕೆ ಪ್ರಮಾಣ ಪತ್ರ ಪ್ರಕ್ರಿಯೆ ಸುಲಭ.
12. ಹೆಚ್ಚಿನ ಭದ್ರತೆ ಹಾಗೂ ಪಾರದರ್ಶಕತೆ ಸಾಧನೆ.

## ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಯಿಂದ ನಿರೀಕ್ಷೆ

1. ಫಲಾನುಭವಿಗಳ ಖಾತೆಗೆ ಕೂಲಿ ಮೊತ್ತವನ್ನು ನೈಜ ಸಮಯದಲ್ಲಿ ವರ್ಗಾವಣೆ ಮಾಡುವುದು.

ಮುಖ್ಯಸ್ಥರು
(ಹಣಕಾಸು ಮತ್ತು ಲೆಕ್ಕಪತ್ರ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

2. ಕೇಂದ್ರ ಮತ್ತು ರಾಜ್ಯದ ನಿಧಿಗೆ ಸಂಬಂಧಿಸಿದ ಒಂದು ಬ್ಯಾಂಕ್ ಖಾತೆಗೆ ಲಿಂಕ್.
3. ವೆಚ್ಚಗಳಿಗೆ ಸಂಬಂಧಿಸಿದಂತೆ ವಿದ್ಯುನ್ಮಾನ ವರ್ಗಾವಣೆ.
4. ಕೋರ್ ಬ್ಯಾಂಕಿಂಗ್ ವ್ಯವಸ್ಥೆಯ ಖಾತೆಗಳಿಗೆ ವಿದ್ಯುನ್ಮಾನ ವರ್ಗಾವಣೆ.
5. ಎಂ.ಐ.ಎಸ್.ನಿಂದ ರಚಿಸಲ್ಪಟ್ಟ ಕೂಲಿ ಪಟ್ಟಿ / ವೇತನ ಪಟ್ಟಿ.
6. ಕೇಂದ್ರ ಬ್ಯಾಂಕ್ ಖಾತೆಗೆ ಕೂಲಿ ಪಟ್ಟಿ / ವೇತನ ಪಟ್ಟಿಯಂತೆ ವರ್ಗಾವಣೆ ಲಿಂಕ್.
7. ಕೇಂದ್ರ ಬ್ಯಾಂಕ್ ಖಾತೆಯಿಂದ ಫಲಾನುಭವಿಗಳ ಖಾತೆಗೆ ಮೊತ್ತ ವರ್ಗಾವಣೆ.
8. ಎಂ.ಐ.ಎಸ್.ನಲ್ಲಿ ಬ್ಯಾಂಕ್ ನಿಂದ ಬಂದ ಸ್ವೀಕೃತಿ ನಮೂದು.

ರಾಜ್ಯದಲ್ಲಿ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯ ಪ್ರಸ್ತುತ ಹಂತ

ರಾಜ್ಯದಲ್ಲಿನ 7 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ತೆಗೆದು ಕೊಂಡು ಪ್ರಾರಂಭಿಕ ಕಾರ್ಯಗಳನ್ನು ಕೈಗೊಳ್ಳಲಾಗಿದ್ದು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:

1. ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ತಾಲ್ಲೂಕು ಪಂಚಾಯತ್‌ನ ಕಾರ್ಯ ನಿರ್ವಹಣಾಧಿಕಾರಿಗಳಿಗೆ ತರಬೇತಿ ನೀಡಲಾಗಿದೆ.
2. ಲೀಡ್ ಬ್ಯಾಂಕ್ ಸಭೆಗಳನ್ನು ಕರೆದು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಜಾಬ್ ಕಾರ್ಡ್ ಹೋಲ್ಡರ್‌ಗಳ ಬ್ಯಾಂಕ್ ಖಾತೆ ಪ್ರಾರಂಭಿಸಲು ಅನವು ಮಾಡಿಕೊಡಲು ತಿಳಿಸಲಾಗಿದೆ.
3. ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಜಾಬ್ ಕಾರ್ಡ್ ಹೋಲ್ಡರ್‌ಗಳ ಬ್ಯಾಂಕ್ ಖಾತೆ ಪ್ರಾರಂಭಿಸಲು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
4. ಸ್ಥಳೀಯ ಬ್ಯಾಂಕ್ ಮತ್ತು ಗ್ರಾಮ ಪಂಚಾಯತ್ ಗಳಿಂದ ಬ್ಯಾಂಕ್ ಖಾತೆಗಳ ನ್ಯಾಯ ಸಮ್ಮತ ಗೊಳಿಸುವಿಕೆ ಕ್ರಮ ಕೈಗೊಳ್ಳಲಾಗಿದೆ.
5. ನ್ಯಾಯ ಸಮ್ಮತಗೊಳಿಸಲಾದ ಬ್ಯಾಂಕ್ ಖಾತೆಗಳ ಮಾಹಿತಿಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಎಂ.ಐ.ಎಸ್‌ನಲ್ಲಿ ಅಳವಡಿಸಲು ಕ್ರಮಕೈಗೊಳ್ಳಲಾಗಿದೆ.
6. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಎಂ.ಐ.ಎಸ್‌ನಲ್ಲಿ ನ್ಯಾಯ ಸಮ್ಮತಗೊಳಿಸಲಾದ ಬ್ಯಾಂಕ್ ಖಾತೆಗಳ ಮಾಹಿತಿಯನ್ನು ಘನೀಕರಿಸಲು ಕ್ರಮಕೈಗೊಳ್ಳಲಾಗಿದೆ.
7. ಸಂಬಂಧ ಪಟ್ಟ ಅಧಿಕಾರಿಗಳಿಂದ ಭರ್ತಿ ಮಾಡಿ ಸಹಿಯಾದ ಡಿಜಿಟಲ್ ಸಹಿ ಪ್ರಮಾಣಪತ್ರದ ಅರ್ಜಿಯನ್ನು ಪಡೆಯಲಾಯಿತು.
8. ಡಿಜಿಟಲ್ ಸಹಿ ಪ್ರಮಾಣಪತ್ರದ ಅರ್ಜಿಯ ಸೂಕ್ಷ್ಮ ಪರಿಶೀಲನೆಯ ನಂತರ ಎನ್.ಐ.ಸಿ.ಗೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.
9. ಸ್ಥಿರ ಐ.ಪಿ. ಮಾಹಿತಿಯನ್ನು ಎನ್.ಐ.ಸಿ.ಗೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.
10. ಎನ್.ಐ.ಸಿ.ಯಿಂದ ಡಿಜಿಟಲ್ ಸಹಿ ಪ್ರಮಾಣಪತ್ರ ಪಡೆಯಲಾಗಿದೆ.

ಈ ವ್ಯವಸ್ಥೆಯಡಿ ಮಾರ್ಚ್ 2013 ರ ಅಂತ್ಯಕ್ಕೆ ಬ್ಯಾಂಕ್ ಮೂಲಕ ಸುಮಾರು 14.00 ಲಕ್ಷಗಳ ವಹಿವಾಟಿನಿಂದ ರೂ.150.00 ಕೋಟಿ ಮೊತ್ತದ ಕೂಲಿಯನ್ನು ಕೂಲಿಗಾರರ ಬ್ಯಾಂಕ್ ಉಳಿತಾಯ ಖಾತೆಗೆ ವರ್ಗಾವಣೆಯಾಗಿದ್ದು, ಇದೊಂದು ಯೋಜನೆ ಅನುಷ್ಠಾನದಲ್ಲಿ ಮಹತ್ವದ ಮೈಲುಗಲ್ಲು. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆ ಯಡಿಯಲ್ಲಿ ಏಪ್ರಿಲ್ 2013 ರ ಅಂತ್ಯಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಕರ್ನಾಟಕದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿಕಾರರಿಗೆ ಕೂಲಿ ಪಾವತಿಯನ್ನು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಡಿ ಪಾವತಿಸಲು ಕ್ರಮ ಕೈಗೊಂಡಿರುವುದು ಹೆಮ್ಮೆಯ ವಿಷಯವಾಗಿದೆ. ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಡಿ ಕೂಲಿ ಪಾವತಿಯನ್ನು ಮಾಡುವುದರ ಜೊತೆಗೆ ಕಾಮಗಾರಿಗಳಲ್ಲಿನ ಸಾಮಾಗ್ರಿಗಳ ವೆಚ್ಚವನ್ನು ಗುತ್ತಿಗೆದಾರರಿಗೆ / ಸಾಮಾಗ್ರಿಗಳ ಮಾರಾಟಗಾರರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪಾವತಿಸಲು 2ನೇ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಕೇರಳ ರಾಜ್ಯದವರೂ ಸಹ ಈ ಯೋಜನೆಯಡಿ ಅನುಷ್ಠಾನಗೊಳಿಸಲು ಅಲ್ಲಿನ ಅಧಿಕಾರಿಗಳು ನಮ್ಮ ರಾಜ್ಯಕ್ಕೆ ಭೇಟಿಕೊಟ್ಟು ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯಡಿ ಕೂಲಿಕಾರರಿಗೆ ಕೂಲಿಪಾವತಿಸುವುದರ ಬಗ್ಗೆ ತರಬೇತಿ ಪಡೆದಿರುತ್ತಾರೆ. ಈ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಯಶೋಗಾಥೆಯನ್ನಾಗಿಸಲು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ರಾಜ್ಯ ಮಟ್ಟದ ತಂಡ ಮತ್ತು ಸಂಬಂಧಪಟ್ಟ ಬ್ಯಾಂಕ್‌ಗಳು ಸಹಭಾಗಿಗಳಾಗಿ ಕಾರ್ಯನಿರ್ವಹಿಸುವುದು ಅತ್ಯಗತ್ಯವಿರುತ್ತದೆ.




# ಉದ್ಯೋಗ ಖಾತರಿ ಯೋಜನೆ–ಕುಂದುಕೊರತೆ/ ದೂರು ವಿಲೇವಾರಿ

– ಸಿ.ಎನ್. ಪದ್ಮಶ್ರೀ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪ್ರಕರಣ 19 ರಲ್ಲಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಕುಂದುಕೊರತೆಗಳು ದೂರು ನಿವಾರಣೆಗಾಗಿ ಕ್ಷೇತ್ರ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸುವ ವಿಧಿವಿಧಾನಗಳನ್ನು ರೂಪಿಸಲು ಅವಕಾಶ ಮಾಡಲಾಗಿದೆ. ಅದರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ ಗ್ರಾಅಪ 116 ಉಖಾಯೋ 2007, ದಿನಾಂಕ 13/3/2009ರಲ್ಲಿ ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಕುಂದುಕೊರತೆ ನಿವಾರಣೆ) ನಿಯಮಗಳು, 2009ನ್ನು ರೂಪಿಸಿ ಅದನ್ನು ಕಾಲಕಾಲಕ್ಕೆ ಇಂದೀಕರಿಸಲಾಗುತ್ತಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗಣ್ಯರು/ ಸಾರ್ವಜನಿಕರು/ ಸಂಘ–ಸಂಸ್ಥೆಗಳು ಇವರಿಂದ ಸರ್ಕಾರದಲ್ಲಿ ಸ್ವೀಕೃತವಾಗುವ ದೂರುಗಳನ್ನು ನಿರ್ದೇಶನಾಲಯದಲ್ಲಿ ಎಂಐಎಸ್‌ನಲ್ಲಿ ದಾಖಲಿಸಿ ಸಂಬಂಧಪಟ್ಟ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗಳವರಿಗೆ ಸದರಿ ದೂರುಗಳ ಕುರಿತು ಪರಿಶೀಲಿಸಿ ಯೋಜನೆಯ ಮಾರ್ಗಸೂಚಿಯನ್ವಯ ಪರಿಶೀಲಿಸಿ ವಿಲೇವಾರಿ ಮಾಡಲು ಹಾಗೂ ಎಂಐಎಸ್ ನಲ್ಲಿ ದಾಖಲಿಸುವುದಲ್ಲದೆ, ಮನವಿದಾರರಿಗೆ ಹಿಂಬರಹ ನೀಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ಪತ್ರದ ಮೂಲಕ ತಿಳಿಸಲಾಗುತ್ತಿದೆ. ಸದರಿ ಪತ್ರವನ್ನು ಇ.ಮೇಲ್/ ಸ್ಪೀಡ್ ಪೋಸ್ಟ್ ಮುಖಾಂತರ ಕಳುಹಿಸಿಕೊಡಲಾಗುತ್ತಿದೆ. ಅವರಿಂದ ಸದರಿ ದೂರುಗಳ ಕುರಿತು ಇಟ್ಟ ಕ್ರಮದ ಬಗ್ಗೆ ಸ್ವೀಕೃತವಾದ ವರದಿಯನ್ನು ಪರಿಶೀಲಿಸಿ ನಂತರ ಮನವಿದಾರರಿಗೆ ಹಿಂಬರಹ ನೀಡಿ ವಿಷಯವನ್ನು ಮುಕ್ತಾಯ ಗೊಳಿಸಲಾಗುತ್ತಿದೆ.

ಇಲ್ಲಿಯವರೆಗೆ ದಿನಾಂಕ 30/3/2012 ರ ಅಂತ್ಯದಲ್ಲಿ ಎಂಐಎಸ್‌ನಲ್ಲಿ ದಾಖಲಾಗಿರುವ 2370 ದೂರುಗಳ ಪೈಕಿ 2135 ದೂರುಗಳ ಕುರಿತು ಕ್ರಮ ಕೈಗೊಂಡು ಪ್ರಕರಣಗಳನ್ನು ಇತ್ಯರ್ಥಗೊಳಿಸಿ ವಿಲೇವಾರಿ ಮಾಡಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ ಗ್ರಾಅಪ 89 ಉಖಾಯೋ 2010, ದಿನಾಂಕ 21/5/2010 ರಲ್ಲಿ ಸಾರ್ವಜನಿಕ/ಸಂಘ–ಸಂಸ್ಥೆಗಳಿಂದ ಸರ್ಕಾರದ ಮಟ್ಟದಲ್ಲಿ ಸ್ವೀಕೃತವಾಗುವ ದೂರುಗಳ ತನಿಖೆಗೆ ಹೆಚ್ಚಿನ ನೆರವು ನೀಡುವ ಸಲುವಾಗಿ ಈ ಕೆಳಕಂಡ ಅಧಿಕಾರಿ ಗಳನ್ನೊಳಗೊಂಡ ರಾಜ್ಯ/ಜಿಲ್ಲಾ ಮಟ್ಟದ ಸ್ಕ್ವಾಡ್ ತಂಡವನ್ನು ರಚಿಸಲಾಗಿದೆ

| ರಾಜ್ಯ ಮಟ್ಟದ ತಂಡ | ಜಿಲ್ಲಾ ಮಟ್ಟದ ತಂಡ |
|---|---|
| 1) ಜಂಟಿ ನಿರ್ದೇಶಕರು (ಎಂಜಿಎನ್‌ಆರ್‌ಇಜಿಎ) | 1) ಜಿಲ್ಲಾಧಿಕಾರಿಯವರು / ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೂಕ್ತವೆಂದು ಅಭಿಪ್ರಾಯ ಪಡುವ ಒಬ್ಬ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿ |
| 2) ಸಹಾಯಕ ನಿರ್ದೇಶಕರು | 2) ಕಾರ್ಯಪಾಲಕ ಅಭಿಯಂತರರು, ಪಿ.ಎಂ.ಜಿ.ಎಸ್.ವೈ. |
| 3) ಲೆಕ್ಕಾ ಪರಿಶೋಧನಾಧಿಕಾರಿ | 3) ಜಂಟಿ ನಿರ್ದೇಶಕರು, ಕೃ ಇಲಾಖೆ<br>4) ಜಿಲ್ಲಾ ಪಂಚಾಯತಿಯ ಒಬ್ಬ ಹಿರಿಯ ಲೆಕ್ಕಾಧಿಕಾರಿ<br>5) ಜಿಲ್ಲಾ ಎಂಐಎಸ್ ನೋಡೆಲ್ ಅಧಿಕಾರಿ |

ಮೇಲಿನ ಎರಡು ತಂಡಗಳು ದೂರಗಳ ಕುರಿತು ತನಿಖೆ ನಡೆಸಿ ವರದಿಯನ್ನು ಪಡೆದು ಪರಿಶೀಲಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅನುಮೋದನೆಯೊಂದಿಗೆ ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತಿನ ಕ್ರಮ ವಹಿಸಲಾಗುತ್ತಿದೆ. ಅಲ್ಲದೆ ದಂಡವನ್ನು ವಸೂಲಿ ಮಾಡುವ ಸಂದರ್ಭಲ್ಲಿ ನಿಯಮಾನುಸಾರ ಅವರಿಂದ ದಂಡವನ್ನು ವಸೂಲಿ ಮಾಡಲಾಗುತ್ತಿದೆ.

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಗತ್ಯವಿರುವ ಎಲ್ಲಾ ಗ್ರಾಮೀಣ ಜನತೆಗೆ ಉದ್ಯೋಗ ಕಲ್ಪಿಸುವ ಒಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ.**

ಸಹಾಯಕ ನಿರ್ದೇಶಕರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಭಾರತ ಸರ್ಕಾರದಿಂದ ಸ್ವೀಕೃತವಾಗುವ ಗಣ್ಯರು/ ಹೆಲ್ಪ್‌ಲೈನ್/ಸಾಮಾನ್ಯ ದೂರುಗಳನ್ನು ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳವರಿಗೆ ಕಳುಹಿಸಿ ದೂರಿನ ಕುರಿತು ತನಿಖೆ ಮಾಡಿಸಿ ಅವರಿಂದ ಕೈಗೊಂಡ ಕ್ರಮದ ಬಗ್ಗೆ ವರದಿ ಪಡೆದು, ಭಾರತ ಸರ್ಕಾರಕ್ಕೆ ಆಂಗ್ಲ ಭಾಷೆಯಲ್ಲಿ ಕೈಗೊಂಡ ಕ್ರಮದ ವರದಿಯನ್ನು ಕಳುಹಿಸಿ ಅವರ ಹಂತದಲ್ಲಿ ವಿಷಯವನ್ನು ಮುಕ್ತಾಯಗೊಳಿಸಲು ಕೋರಲಾಗುತ್ತಿದೆ.

ಯೋಜನೆಯಡಿ ಎಂಐಎಸ್‌ನಲ್ಲಿ ದಾಖಲಾಗುವ/ ಮುಕ್ತಾಯಗೊಳಿಸಲಾಗುವ ದೂರುಗಳ ಮಾಹಿತಿಯು www.nrega.nic.in ವೆಬ್ ಸೈಟ್‌ನಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗಿದೆ.

ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಕುಂದುಕೊರತೆ ನಿವಾರಣೆ) ನಿಯಮಗಳು, 2009ರ ನಿಯಮ–9ರನ್ವಯ ದೂರುಗಳ ವಿಲೇಯ ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಗೊಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1 | ಜಿಲ್ಲಾಧಿಕಾರಿ | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯರು |
| 3 | ಸದಸ್ಯ ಕಾರ್ಯದರ್ಶಿ, ಜಿಲ್ಲಾ ಕಾನೂನುಗಳ ಸೇವಾ ಪ್ರಾಧಿಕಾರ | ಸದಸ್ಯರು |
| 4 | ಜಿಲ್ಲೆಯ ಒಬ್ಬ ವಿಭಾಗಾಧಿಕಾರಿ ಮತ್ತು ಒಬ್ಬ ತಹಸೀಲ್ದಾರರು | ಸದಸ್ಯರು |
| 5 | ಜಿಲ್ಲೆಯ ಒಬ್ಬ ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯರು |
| 6 | ಮ.ಗಾಂ.ರಾ.ಗ್ರಾ.ಉ.ಖಾ. ಯೋಜನೆಯಲ್ಲಿ ಪಾಲ್ಗೊಂಡ ಯಾವುದೇ ಸ್ವಯಂಸೇವಾ ಸಂಸ್ಥೆಯ | ಸದಸ್ಯರು |
| 7 | ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆಯನ್ನು ನಿರ್ವಹಿಸುವ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ | ಸದಸ್ಯ–ಕಾರ್ಯದರ್ಶಿ |

ಸಮಿತಿಯು ಒಂದು ತಿಂಗಳಲ್ಲಿ ಕನಿಷ್ಠ ಒಂದು ಬಾರಿಯಾದರೂ ವಿಲೆಯ ಪ್ರಗತಿಯನ್ನು ಪರಿಶೀಲಿಸಬೇಕು. ವಿಲೇಯುಲ್ಲಿನ ವಿಫಲತೆಯು ಬಗ್ಗೆ ಮಂಡಿಸಿದ ವರದಿಯನ್ನನುಸರಿಸಿ ಅಗತ್ಯ ವಿಧಿಗಳನ್ನು ಅನುಸರಿಸಿದ ಮೇಲೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 25ನೇ ಪ್ರಕರಣ ಮೇರೆಗೆ ದಂಡವನ್ನು ವಿಧಿಸುವ ಅಧಿಕಾರಗಳನ್ನು ಸಮಿತಿಯು ಹೊಂದಿರುತ್ತದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಗತ್ಯವಿರುವ ಎಲ್ಲಾ ಗ್ರಾಮೀಣ ಜನತೆಗೆ ಉದ್ಯೋಗ ಕಲ್ಪಿಸುವ ಒಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯಡಿ ಉದ್ಯೋಗ ಪಡೆದು ತಮ್ಮ ಆರ್ಥಿಕ ಸ್ಥಿತಿಗತಿಗಳ ಸುಧಾರಣೆ ಮಾಡಿಕೊಳ್ಳಲು ಸುವರ್ಣಾವಕಾಶ ಈ ಯೋಜನೆಯಲ್ಲಿದೆ. ಇದರ ಜೊತೆಗೆ ಗ್ರಾಮೀಣ ಪ್ರದೇಶಕ್ಕೆ ಅತ್ಯಗತ್ಯವಾದ ಮೂಲಭೂತ ಸೌಲಭ್ಯಗಳ ಏರ್ಪಾಡಿಗೆ ಶ್ರಮದಾನ ನೀಡಿದ ಹೆಮ್ಮೆಯೂ ಇವರ ಪಾಲಿನದಾಗಿರುತ್ತದೆ. ಆದುದರಿಂದ ಗ್ರಾಮೀಣ ಪ್ರದೇಶದ ಎಲ್ಲಾ ನಿರುದ್ಯೋಗಸ್ಥರೂ ಅದರಲ್ಲೂ ಯುವಜನತೆ ಲಿಂಗಬೇದವಿಲ್ಲದೆ ಈ ಕಾರ್ಯಕ್ರಮದ ಪಾಲುದಾರರರಾಗಬೇಕು. ಪ್ರತಿ ಕುಟುಂಬವನ್ನು ಸ್ವಾವಲಂಬಿ ಕುಟುಂಬವನ್ನಾಗಿ ಮಾಡಿ ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರು ಕಂಡ ರಾಮರಾಜ್ಯದ ಕನಸನ್ನು ನನಸಾಗಿಸಬೇಕು.

ಯೋಜನೆ ಅನುಷ್ಠಾನದ ವಿಧಿವಿಧಾನಗಳ ಉಲ್ಲಂಘನೆ, ಅನುದಾನ ದುರುಪಯೋಗ, ಕೂಲಿ ಹಣ ಪಾವತಿ, ಕಾಮಗಾರಿಯ ಗುಣಮಟ್ಟ ಮುಂತಾದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳವರಿಂದ ಮಾಹಿತಿ ಪಡೆಯಬಹುದು. ಈ ಯಾವುದೇ ವಿಷಯದಲ್ಲಿ ಮಾಹಿತಿ ತೃಪ್ತಿಕರವೆನಿಸದಿದ್ದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ / ನಿರ್ದೇಶಕರು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ / ಸಂಬಂಧಪಟ್ಟ ಜಿಲ್ಲೆಯ ಒಂಬುಡ್ಸ್‌ಮನ್ ಇವರುಗಳಿಗೆ ಲಿಖಿತ ದೂರು ಸಲ್ಲಿಸಬಹುದು. ಇದರೊಂದಿಗೆ ಹೊಸದಾಗಿ ಪ್ರಾರಂಭಿಸಿರುವ ಕಾಲ್ ಸೆಂಟರ್‌ನ ಉಚಿತ ದೂರವಾಣಿ ಸಂಖ್ಯೆ 18004258666 ಮೂಲಕವೂ ಸಹ ದೂರು ನೀಡಬಹುದು. ಸದರಿ ದೂರುಗಳನ್ನು ಸಂಬಂಧಪಟ್ಟ ಕಾರ್ಯಕ್ರಮ ಸಮನ್ವಯಾಧಿಕಾರಿ ರವರ ಹಂತದಲ್ಲಿ ಪರಿಶೀಲನೆ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗುತ್ತದೆ.

ಹಾಗಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾರ್ವಜನಿಕರ ಸಲಹೆ ಸೂಚನೆ ದೂರುದುಮ್ಮಾನಗಳ ಆಲಿಕೆಗೆ ಸದಾ ಸ್ವಾಗತವಿದೆ.

# ಉದ್ಯೋಗ ಖಾತರಿ ಯೋಜನೆ ಮತ್ತು ಸಾಮಾಜಿಕ ಲೆಕ್ಕಪತ್ರ ಪರಿಶೋಧನೆ

– ಪ್ರೊ. ಎ.ಎಚ್. ಮಾಸಾಪತಿ

ಯೋಜನೆಯ ಬಗ್ಗೆ ಹಿರಿಯ ಹಾಗೂ ವಿಶ್ರಾಂತ ಪ್ರಾಧ್ಯಾಪಕರು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಕಳೆದ ಆರು ವರ್ಷಗಳಲ್ಲಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ರಾಷ್ಟ್ರದ ಲಕ್ಷಾಂತರ ಗ್ರಾಮೀಣ ಕಡು ಬಡವರ ಮತ್ತು ದುರ್ಬಲ ಸಮುದಾಯಗಳಿಗೆ ಜೀವನದ ಆಶಾಕಿರಣವಾಗಿದೆ. ಗ್ರಾಮಾಂತರ ಕುಟುಂಬಗಳ ಜೀವನ ಮಟ್ಟದ ಸುಧಾರಣೆಗಾಗಿ ಸಾಮಾಜಿಕ / ಆರ್ಥಿಕ ಭದ್ರತೆ [Socio-Economic Security] ನೀಡುವ ಕಾರ್ಯದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಅದು ಅಭಿವೃದ್ಧಿ ಪ್ರಕ್ರಿಯೆಗೆ ಸಮಾನತೆಯ ಆಯಾಮ ನೀಡುವ ಕಾಲಮೀತಿಯಲ್ಲಿ ಉದ್ಯೋಗಾವಕಾಶ ಕಲ್ಪಿಸುವ, ಪ್ರಾಕೃತಿಕ ಸಂಪನ್ಮೂಲ ನಿರ್ವಹಣೆಗೆ ಆದ್ಯತೆ ನೀಡುವ, ಅಧಿಕ ಬಾಳಿಕೆಯ ಸ್ವತ್ತಿನ ಸೃಷ್ಟಿಗೆ ಒತ್ತು ಕೊಡುವ, ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆಯ ಸುಸ್ಥಿರ ಅಭಿವೃದ್ಧಿಗೆ ಚಾಲಕ ಶಕ್ತಿ ಆಗಿ ದೃಢವಾದ ವಿಕೇಂದ್ರೀಕರಣ ತತ್ವದ ತಳಹದಿಯ ಮೇಲೆ ರಚಿಸಲಾದ ಅನುಷ್ಠಾನದ ವಿನ್ಯಾಸ ಹೊಂದಿದೆ. ತೃಣಮೂಲ ಪ್ರಜಾಪ್ರಭುತ್ವ ಹಾಗೂ ಪಾರದರ್ಶಕತೆಯ ಪರಿಕಲ್ಪನೆಯ ಆಧಾರದ ಮೇಲೆ, ಆಡಳಿತ ಸುಧಾರಣೆಯ ಮಾದರಿಯನ್ನು ರೂಪಿಸಲಾಗಿದೆ.

ದಾರಿದ್ರ್ಯ ಹಾಗೂ ನಿರುದ್ಯೋಗದಂತಹ ಜ್ವಲಂತ ಸಮಸ್ಯೆಗಳು ಅತಿ ಗಂಭೀರವಾಗಿವೆ. ಇಂತಹ ಸಮಸ್ಯೆಗಳು ಮಾನವನ ಆಂತರಿಕ ಗೌರವ / ಘನತೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಧ್ವಂಸಗೊಳಿಸುತ್ತವೆ. ಭಾರತದ ಕೋಟ್ಯಾಂತರ ಗ್ರಾಮೀಣ ಜನರ ದಾರಿದ್ರ್ಯ ಹಾಗೂ ಅದರ ದುಷ್ಪರಿಣಾಮಗಳು ಕೇವಲ ಇಂತಹ ಜನರ ಮಟ್ಟಿಗೆ ಮಾತ್ರ ದುರಂತವಲ್ಲ. ಅದು ನಿವಾರಣೆಗೆ ನಿಲುಕದ / ಅಳಿಸಲು ಅಸಾಧ್ಯವಾದ 'ರಾಷ್ಟ್ರೀಯ ಕಳಂಕ' ವಾಗಿದೆ. ದಾರಿದ್ರ್ಯ ನಿರ್ಮೂಲನಾ ಕಾರ್ಯಕ್ರಮಗಳಲ್ಲಿ ಹೂಡಿಕೆ ಮಾಡಿದ ಸರ್ಕಾರಿ ಖಜಾನೆಯ ಪ್ರತಿಯೊಂದು ರೂಪಾಯಿಯಲ್ಲಿ ಕಡುಬಡವರಿಗೆ 10–15 ಪೈಸೆ ಮಾತ್ರ ತಲುಪಿದರೆ ಸಾಮಾಜಿಕ ನ್ಯಾಯದ ಧ್ಯೇಯವನ್ನು ಸಾಧಿಸಲು ಸಾಧ್ಯವಿಲ್ಲ. ಪ್ರೊ. ಜೀನ್‌ಡ್ರೇಜ್, 'ಉದ್ಯೋಗ ಭರವಸೆ ಯೋಜನೆಯ ಆಶೋತ್ತರ ಮತ್ತು ವಾಸ್ತವಿಕತೆ'ಯನ್ನು ಕುರಿತು, ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಅಧಿಕಾರಿಗಳು ಯಾವದೇ ಯೋಜನೆಯನ್ನು ಮೊಟಕುಗೊಳಿಸಲು ಅಥವಾ ರದ್ದುಗೊಳಿಸಲು ಪ್ರಯತ್ನಿಸಬಹುದು. ಆದರೆ, ಅವರು ಶಾಸನವನ್ನು ವಿಕೃತಗೊಳಿಸಲು ಸಾಧ್ಯವಿಲ್ಲ. ಶಾಸನದ ಬದಲಾವಣೆಗಾಗಿ, ಸಂಸತ್ತಿನಲ್ಲಿ ತಿದ್ದುಪಡಿಗೆ ಮಂಜೂರಾತಿ ಪಡೆಯಬೇಕಾಗುತ್ತದೆ. ಆದುದರಿಂದ, ಯೋಜನೆಗಿಂತಲೂ ಕಾನೂನು ದೀರ್ಘಕಾಲ ಬಾಳುತ್ತದೆ.

ಉದ್ಯೋಗ ಭರವಸೆಯ ಕಾನೂನು, ಭಾರತದ ಸಾಮಾಜಿಕ ಧೋರಣೆಯ ವ್ಯಾಪಕ ಸ್ವರೂಪ ಹಾಗೂ ಸಮಗ್ರವಾದ ದೃಷ್ಟಿಕೋನದ ಒಂದು ಭಾಗವಾಗಿದೆ. ಅದು ಸರ್ಕಾರದ ಮೇಲೆ ಕಾನೂನು ಬದ್ಧವಾದ ಜವಾಬ್ದಾರಿಯನ್ನು ಹೊರಿಸುತ್ತದೆ ಮತ್ತು ಕೂಲಿಕಾರರಿಗೆ 'ಸಾಮೂಹಿಕ ಚೌಕಾಸಿ'ಯ ಸಾಮರ್ಥ್ಯವನ್ನು ನೀಡುತ್ತದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾನೂನಿನ ವಿರೋಧಿಗಳು ಅದರ ದೂರಗಾಮಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಾಮುಖ್ಯತೆಯನ್ನು ತಿಳಿದಿರುವುದಿಲ್ಲ. ಉದ್ಯೋಗ

ನಿರ್ದೇಶಕರು, ವಿಕಾಸ ಪ್ರಕಾಶನ, ನಂ.1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ.ರಸ್ತೆ, ಸುಲ್ತಾನ್‌ಪಾಳ್ಯ, ಬೆಂಗಳೂರು–560032

ಭರವಸೆಯ ಕಾನೂನು ಗ್ರಾಮೀಣ ಕುಟುಂಬಗಳಿಗೆ ದಾರಿದ್ರ್ಯ ಮತ್ತು ಹಸಿವೆಯ ವಿರುದ್ಧ ರಕ್ಷಣೆ ನೀಡುವ ಕಾರ್ಯದಲ್ಲಿ ಒಂದು ಮಹತ್ವದ ಹೆಜ್ಜೆ ಆಗಿದೆ. ವಾಸ್ತವಿಕವಾಗಿ, ಅದು ಪೂರ್ಣಪ್ರಮಾಣದಲ್ಲಿ ಜಾರಿಗೆ ಬಂದರೆ ಗ್ರಾಮೀಣ ಭಾಗದ ಕೋಟ್ಯಾಂತರ ಕುಟುಂಬಗಳು ದಾರಿದ್ರ್ಯ ರೇಖೆಯಿಂದ ಮೇಲೆ ಬರಲು ಸಾಧ್ಯವಾಗುವುದಿಲ್ಲ. ಅದಲ್ಲದೆ ಗ್ರಾಮಗಳಿಂದ ನಗರ ಪ್ರದೇಶಗಳಿಗೆ ಜನರು ವಲಸೆ ಹೋಗುವ ಪ್ರಮಾಣದಲ್ಲಿ ಉಳಿತಾಯವಾಗುವದು.

## ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005 [NREGA]

ರಾಷ್ಟ್ರದ ಅನೇಕ ಭಾಗಗಳಲ್ಲಿ ಬಡಕುಟುಂಬಗಳು ಕನಿಷ್ಠ ಕೂಲಿ / ವೇತನಕ್ಕಾಗಿ ಒತ್ತಾಯ ಪಡಿಸುತ್ತವೆ. ನಿರ್ಲಕ್ಷ್ಯ / ಉದಾಸೀನ ಧೋರಣೆಯನ್ನು ತ್ಯಜಿಸಿ, ಸರ್ಕಾರವು ಹೆಚ್ಚಿನ ವೇತನ ಹಾಗೂ ನಿರುದ್ಯೋಗ ಭತ್ಯ ನೀಡಲು ಆಗ್ರಹಿಸುತ್ತದೆ. ಓರ್ವ ಕಡುಬಡವನಿಗೆ ಉದ್ಯೋಗ ನೀಡುವಂತಹ ಈ ಶಾಸನವನ್ನು 2006ರ ಫೆಬ್ರವರಿ 2ರಂದು ಜಾರಿಗೆ ತರಲಾಗಿದೆ. ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಗ್ರಾಮೀಣ ಕುಟುಂಬಕ್ಕೆ ಕನಿಷ್ಠ 100 ದಿನಗಳ ಉದ್ಯೋಗ ನೀಡುವಂತಹ ಪ್ರಗತಿಪರ ಶಾಸನವಾಗಿದೆ. ಉದ್ಯೋಗ ಕೋರಿ ಅರ್ಜಿ ಸಲ್ಲಿಸುವ ಗ್ರಾಮೀಣ ಜನರಿಗೆ 15 ದಿನಗಳೊಳಗಾಗಿ ಸರ್ಕಾರವು ಕೆಲಸ ನೀಡಬೇಕು. ಒಂದು ವೇಳೆ ಉದ್ಯೋಗ ನೀಡಲು ವಿಫಲವಾದರೆ ಸರ್ಕಾರ 'ನಿರುದ್ಯೋಗ ಭತ್ಯೆ' [Unemployment Allowance] ನೀಡಬೇಕಾಗುತ್ತದೆ. ಶಾಸನಬದ್ಧವಾಗಿರುವದರಿಂದ ಮೊದಲಿನ ಉದ್ಯೋಗ ನೀಡಿಕೆಯ ಕಾರ್ಯಕ್ರಮಗಳಿಗಿಂತಲೂ ಪ್ರಚಲಿತ ಯೋಜನೆಯು ವಿಶಿಷ್ಟವಾಗಿದೆ. ಸ್ಥಳೀಯ ಸರ್ಕಾರ ಮತ್ತು ತೃಣಮೂಲ ಮಟ್ಟದ ಪಂಚಾಯತಿಗಳ ಮುಖಾಂತರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಕೈಕೊಳ್ಳಬೇಕಾದ ಕೆಲಸಗಳನ್ನು ಗ್ರಾಮಸಭೆಗಳಲ್ಲಿ ಗುರುತಿಸುವ ಹಾಗೂ ಊರ್ಜಿತಗೊಳಿಸುವ ಕಾರ್ಯದಲ್ಲಿ; ಗ್ರಾಮ ಪಂಚಾಯತ್ ವ್ಯವಸ್ಥೆಯು ನಿರ್ಣಾಯಕ ಪಾತ್ರ ವಹಿಸುತ್ತದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ 'ಮಹಾತ್ಮಾ ಗಾಂದಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಎಂದು ಮರುನಾಮಕರಣ ಮಾಡಲಾಗಿದೆ. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಾಜಿ ಸಚಿವರಾಗಿದ್ದ ಶ್ರೀ ರಘುವಂಶ ಪ್ರಸಾದ್ ಸಿಂಗ್ ಅವರು ಈ ಶಾಸನದ ಪ್ರಾಮುಖ್ಯತೆ ಹಾಗೂ ಪ್ರಧಾನ ಅಂಶಗಳನ್ನು ಕುರಿತು ಸ್ಪಷ್ಟವಾಗಿ ನಿರೂಪಿಸಿದ್ದಾರೆ.

ಕೌಶಲ್ಯ ರಹಿತ ಗ್ರಾಮೀಣ ಬಡವರಿಗೆ ಉದ್ಯೋಗ ಸೃಷ್ಟಿಸುವ ಆದಾಯ ಗಳಿಕೆಯ ಅವಕಾಶಗಳನ್ನು ಹೆಚ್ಚಿಸುವ ಮತ್ತು ಗ್ರಾಮೀಣ ಮೂಲ ಸೌಲಭ್ಯಗಳನ್ನು ವಿಸ್ತರಿಸುವಂತಹ ಧ್ಯೇಯವಿದೆ.

### ಪ್ರಧಾನ ಲಕ್ಷಣಗಳು :

1 ವಿಕೇಂದ್ರೀಕೃತ ಯೋಜನೆ
2 ಹಕ್ಕು ಆಧಾರಿತ ಚೌಕಟ್ಟು
3 ಕಾಲಮಿತಿಯ ಭರವಸೆ
4 ಮಹಿಳಾ ಸಬಲೀಕರಣ
5 ಸಾರ್ವಜನಿಕ ಜವಾಬ್ದಾರಿ
6 ಪಾರದರ್ಶಕತೆ
7 ಯೋಜನೆಯ ವ್ಯಾಪ್ತಿಯಲ್ಲಿ ಅನುಮತಿ ನೀಡಲಾದ ಕಾಮಗಾರಿಗಳು
8 ಕಾರ್ಮಿಕ ಪ್ರೋತ್ಸಾಹಕ ಕಾರ್ಯಗಳು
9 ಕಾಮಗಾರಿ ಪ್ರದೇಶದ ಸೌಲಭ್ಯಗಳು
10 ಆರ್ಥಿಕ ನೆರವು
11 ರಾಜ್ಯ ಸರ್ಕಾರ ಭರಿಸುವ ವೆಚ್ಚ

ಉದ್ಯೋಗ ಭರವಸೆಯ ಕಾನೂನಿಂದ ಕೆಲಸಗಾರರು ಮತ್ತು ಕಡುಬಡವರಿಗೆ ದೀರ್ಘಕಾಲೀನ ಕಾನೂನು ಬದ್ಧವಾದ ಹಕ್ಕು ಪ್ರಾಪ್ತವಾಗುತ್ತದೆ. ಅವರು ಸನ್ನದ್ಧರಾಗಿದ್ದಾರೆ. ಭಾರತದ ಮಹಾಲೇಖಪಾಲರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯವೈಖರಿಯನ್ನು ಕುರಿತು ಉಲ್ಲೇಖಿಸಿದ್ದಾರೆ. ಕೆಲವು ತಜ್ಞರು ಶಾಸನದ ಕಾರ್ಯಾಚರಣೆಯ ಬಗೆಗೆ ಹಲವಾರು ರಚನಾತ್ಮಕ ಟೀಕೆ / ಟಿಪ್ಪಣಿಗಳನ್ನು ಬರೆದಿದ್ದಾರೆ. ಆದರೆ, ಅಭಿವೃದ್ಧಿಪರ ಆಡಳಿತದ ಪೂರ್ವಾಗತ್ಯಗಳನ್ನು [Pre-Requisites] ಚೆನ್ನಾಗಿ ಅರ್ಥಮಾಡಿಕೊಂಡು ಶಾಸನವನ್ನು ಕಾರ್ಯಾಚರಣೆಗೆ ತಂದರೆ ಗ್ರಾಮೀಣ ಕಡುಬಡವರ ಜೀವನಕ್ಕೆ ಭದ್ರತೆ ನೀಡಲು ಸಾಧ್ಯವಾಗುವದು.

### ಸಾಮಾಜಿಕ ಲೆಕ್ಕಪತ್ರ ಪರಿಶೋಧನೆ (Social Audit)

ಅದು ಸಾಮೂಹಿಕ ತಿಳುವಳಿಕೆಗೆ ಪ್ರೋತ್ಸಾಹನೆ ನೀಡುವ ಪಾರದರ್ಶಕತೆ ಹಾಗೂ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು, ಜನತೆಯ ಸಹಭಾಗಿತ್ವ ಅತ್ಯವಶ್ಯಕವಾಗಿದೆ. ಗ್ರಾಮಸಭೆಗಳ ಮುಖಾಂತರ ನಾಗರಿಕ

ಗುಂಪುಗಳು ಸಾಮಾಜಿಕ ಪರಿಶೋಧನಾ ಪ್ರಕ್ರಿಯೆಯಲ್ಲಿ ನಿರತವಾದಾಗ ಮಾತ್ರ ಅವುಗಳ ಪರಿಣಾಮ ಕ್ರಮೇಣವಾಗಿ ತಳಮಟ್ಟಕ್ಕೆ (Grass-Root-Level) ಹರಡುತ್ತದೆ. ನೈಜಸ್ವರೂಪದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಸ್ಥಾಪನೆಗಾಗಿ, ಜನರಿಗೆ ಮಾಲೀಕತ್ವದ ಹಕ್ಕನ್ನು ಕೊಡಬೇಕಾದ ಸಾಧನವಾಗಿದೆ. ಅವಕಾಶವಂಚಿತರು, ಶೀಷಿತರು ಹಾಗೂ ಕಡುಬಡವರು, ಸಾಮಾಜಿಕ ನ್ಯಾಯ ಸಾಧನೆಗಾಗಿ ಸಜ್ಜುಗೊಳ್ಳಬೇಕಾಗುತ್ತದೆ.

2008ರಲ್ಲಿ, ಝಾರ್ಖಂಡ್ ರಾಜ್ಯದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ ನಿರ್ವಾಹಕರು, 'ಸಾಮಾಜಿಕ ಲೆಕ್ಕಪತ್ರ ಪರಿಶೋಧನೆ'ಯನ್ನು ಕುರಿತು ಪರಿಣಾಮಕಾರಿಯಾಗಿ ವಿವರಿಸಿದ್ದಾರೆ. ಇಂತಹ ದೃಷ್ಟಿಕೋನಗಳು ಭಾರತದ ಎಲ್ಲ ಝಾರ್ಖಂಡ್ ಸರ್ಕಾರ ರಚಿಸಿದ ನಿಯಮ/ನಿಬಂಧನೆಗಳ 10 ಮತ್ತು 11ನೇ ಅಧ್ಯಾಯದಲ್ಲಿ, ಪಾರದರ್ಶಕತೆ ಹಾಗೂ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳುವ ಬಗೆಗೆ ಪ್ರಸ್ತಾಪಿಸಲಾಗಿದೆ. ಈ ನಿಯಮಗಳ ಮೇರೆಗೆ, ಗ್ರಾಮಸಭೆಗೆ ಸಾಮಾಜಿಕ ಪರಿಶೋಧನೆಯ ಅಧಿಕಾರವನ್ನು ನೀಡಲಾಗಿದೆ. ಆದರೆ ಇಂತಹ ಸಂಗತಿಗೆ ಸಾಕಷ್ಟು ಪ್ರಚಾರ ಪ್ರಾಪ್ತವಾಗಿಲ್ಲ. ಕೆಲವು ಸರ್ಕಾರೇತರ ಸಂಸ್ಥೆಗಳು ಮತ್ತು ಪ್ರಗತಿಪರ ಸಂಘಟನೆಗಳು, ಸಾಮಾಜಿಕ ಪರಿಶೋಧನೆಯ ಕಾರ್ಯವಿಧಾನವನ್ನು ಸಾರ್ವಜನಿಕರಿಗೆ ತಿಳಿಸಿವೆ. 'ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ ಹಾಗೂ ಪರಿವರ್ತನಾ ಇತ್ಯಾದಿ ಸಂಸ್ಥೆಗಳು, ಇಂತಹ ವಿಷಯದ ಬಗೆಗೆ ಜಾಗ್ರತಿ ಮೂಡಿಸಿವೆ. ರಾಜಸ್ಥಾನದ ದುರ್ಗಾಪೂರ್ ಮತ್ತು ಆಂಧ್ರಪ್ರದೇಶದ ಅನಂತಪೂರ್ ಜಿಲ್ಲೆಗಳಲ್ಲಿ, ರಾಷ್ಟ್ರಮಟ್ಟದ ಸಾಮಾಜಿಕ ಪರಿಶೋಧನೆ ನಡೆಸಿದ ನಂತರ, ಝಾರ್ಖಂಡ್ ರಾಜ್ಯದ ರಾಂಚಿ ಜಿಲ್ಲೆಯಲ್ಲಿ, 'ಸಾಮೂಹಿಕ ಪ್ರಶ್ನೋತ್ತರ ಸಭೆ'ಯನ್ನು ನಡೆಸಲಾಗಿದೆ.

ಝಾರ್ಖಂಡ್ 'N.R.E.G.A.' ವಾಚ್/ಕಾವಲು ಎಂಬ ವೇದಿಕೆಯ ಮೂಲಕ, ಸಾಮಾಜಿಕ ಪರಿಶೋಧನೆ ಹಾಗೂ ಸಾಮೂಹಿಕ ಪ್ರಶ್ನೋತ್ತರ ಸಭೆಗಳನ್ನು ಏರ್ಪಡಿಸಲಾಗಿದೆ. ಸಾಮಾಜಿಕ ಪರಿಶೋಧನೆಯ ಕಾರ್ಯವನ್ನು 2007ರ ಜನೇವರಿಯಲ್ಲಿ ಆರಂಭಿಸಲಾಯಿತು. ಹಲವಾರು ಸಭೆಗಳ ನಂತರ ಸಾಮಾಜಿಕ ಪರಿಶೋಧನೆಯ ದಿನಾಂಕವನ್ನು ನಿರ್ಧರಿಸಲಾಯಿತು. ಜಿಲ್ಲಾಧಿಕಾರಿಯ ಸಹಕಾರದೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು, ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಉದ್ದೇಶಕ್ಕಾಗಿ ರಾಂಚಿಯ 4 ಬ್ಲಾಕ್‌ಗಳ (ಮಂದರ್, ಅಂಗದ, ಖಿಮ್ತಿ ಮತ್ತು ಕಂಕೆ) 15 ಪಂಚಾಯತಿಗಳಲ್ಲಿ ಪರಿಯೋಜನೆಗಳ ಆಯ್ಕೆ ಹಾಗೂ ಸಂಬಂಧಿತ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

1. ಕೆಲಸಗಾರರ ಪಟ್ಟಿ
2. ಅಳತೆಯ ಡೈರಿ
3. ಖರೀದಿಸಿದ ವಸ್ತುಗಳ ಬಿಲ್ಲ್/ರಸೀದಿ
4. ಕೆಲಸದ ಆದೇಶ
5. ಅಂದಾಜುಗಳು
6. ಗ್ರಾಮಸಭೆಯ ಅನುಮೋದನೆ
7. ಗ್ರಾಮಸಭೆಯ ನಿರ್ಣಯದ ಪ್ರತಿ ಇತ್ಯಾದಿ

ಸಾಮಾಜಿಕ ಪರಿಶೋಧನೆಯ ಪ್ರಕ್ರಿಯೆಯನ್ನು 2007ರ ಮೇ 6 ರಿಂದ ಮೇ 24ರವರೆಗೆ ನಡೆಸಲು ನಿಶ್ಚಯಿಸಲಾಗಿತ್ತು. ಝಾರ್ಖಂಡ ರಾಜ್ಯದ ಪ್ರತಿಯೊಂದು ಜಿಲ್ಲೆಯ ಪ್ರತಿನಿಧಿಗಳು ಮತ್ತು ರಾಷ್ಟ್ರದ ಖ್ಯಾತ ಸಾಮಾಜಿಕ ಕಾರ್ಯಕರ್ತರು, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಭೆಯಲ್ಲಿ ಸಮಾವೇಶಗೊಂಡಿದ್ದರು. ರಾಂಚಿಯ ಪಂಚಾಯತ್‌ರಾಜ್ ತರಬೇತಿ ಕೇಂದ್ರದಲ್ಲಿ 3 ದಿನಗಳ (2007ರ ಮೇ 13 ರಿಂದ 15ರವರೆಗೆ) ತರಬೇತಿ ಕಾರ್ಯಕ್ರಮದಲ್ಲಿ, ಪ್ರತಿನಿಧಿಗಳಿಗೆ ತರಬೇತಿ ನೀಡಲಾಗಿದೆ.

## ಪರಿಣಾಮಕಾರಿ ಅನುಷ್ಠಾನ

ಸಾಮಾನ್ಯವಾಗಿ, ಕಳೆದ ಶತಮಾನದ 50ರ ದಶಕದಲ್ಲಿ ಪಂಚವಾರ್ಷಿಕ ಯೋಜನೆ ಆರಂಭವಾದ ನಂತರ ಸಾರ್ವಜನಿಕ ಆಡಳಿತದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ದೈನಂದಿನ ಆಡಳಿತ ಮತ್ತು ಯೋಜನಾ ಬದ್ಧವಾದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆರ್ಥಿಕ ಅವ್ಯವಹಾರ / ಭ್ರಷ್ಟಾಚಾರ ತಲೆ ಎತ್ತಿದೆ. ನೆಹರೂ ಆಳ್ವಿಕೆಯಲ್ಲಿ ಲಘು ಪ್ರಮಾಣದಲ್ಲಿದ್ದ ಭ್ರಷ್ಟಾಚಾರವು 21ನೇ ಶತಮಾನದ ಪ್ರಥಮ ದಶಕದಲ್ಲಿ ಲಕ್ಷಾಂತರ ಕೋಟಿ ರೂ.ಗಳಷ್ಟಾಗಿದೆ. ಯೋಜನೆಯಿಂದ ಯೋಜನೆಗೆ ಅದರ ಗಾತ್ರ ಬೃಹದಾಕಾರ ತಲುಪಿದೆ. ಉನ್ನತ ಮಟ್ಟದಲ್ಲಿರುವ ವ್ಯಕ್ತಿಗಳ ಆರ್ಥಿಕ ಅವ್ಯವಹಾರಗಳು, ಕೆಳಮಟ್ಟದಲ್ಲಿ ಕಾರ್ಯನಿರ್ವಹಿಸುವಂತಹ ಆಡಳಿತಾಧಿಕಾರಿಗಳ ನೈತಿಕ ಮಟ್ಟದ ಮೇಲೆ ದುಷ್ಪರಿಣಾಮಬೀರುತ್ತವೆ. ಆದುದರಿಂದ, ಭ್ರಷ್ಟಾಚಾರ ನಿರ್ಮೂಲನೆಗಾಗಿ ಅತಿ ಕಠಿಣವಾದ ಪರಿಣಾಮಕಾರಿ ಶಾಸನಗಳು ಅತ್ಯಗತ್ಯವಾಗಿವೆ. ಪ್ರತಿಯೊಂದು ರಾಜ್ಯದಲ್ಲಿ, ಆರ್ಥಿಕ ಅಪರಾಧಗಳ ವಿಚಾರಣೆಗಾಗಿ, ಲೈಂಗಿಕ

ಅಪರಾಧಿಗಳಿಗಿಂತಲೂ ಕಠಿಣವಾದ ತ್ವರಿತಗತಿಯ ಶಿಕ್ಷೆ ಆಗಬೇಕು.

ಕಡುಬಡವರು ಹಾಗೂ ದುರ್ಬಲ ಸಮುದಾಯಗಳ ಅಭಿವೃದ್ಧಿಗಾಗಿ ನಿಗದಿಪಡಿಸಿದ ಸಂಪನ್ಮೂಲಗಳನ್ನು ಬಲಾಢ್ಯ ದಲ್ಲಾಳಿಗಳು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದೆ. ಜನಪರ ಯೋಜನೆಯ ಕಾರ್ಯಾಚರಣೆಯಲ್ಲಿ ಕಂಡುಬಂದಿರುವ ಲೋಪ / ದೋಷಗಳನ್ನು ನಿವಾರಿಸಲು ಸೂಕ್ತವಾದ ಕಾನೂನು ಕ್ರಮಗಳನ್ನು ಕೈಕೊಳ್ಳುವ ಅಗತ್ಯವಿದೆ. ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಮೂರು ಹಂತಗಳಲ್ಲಿ ಪ್ರಾಮಾಣಿಕತೆ, ದಕ್ಷತೆ, ಕಾರ್ಯತತ್ಪರತೆ ಹಾಗೂ ಹೊಣೆಗಾರಿಕೆಯ ಬೆಳವಣಿಗೆಗಾಗಿ, ರಾಜ್ಯ ಸರ್ಕಾರಗಳು ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಹಲವಾರು ಮಹತ್ವದ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಹಣಕಾಸಿನ ಸದ್ಬಳಕೆಗಾಗಿ ವಿವಿಧ ಮಟ್ಟದ ಅಧಿಕಾರಿಗಳಿಗೆ ಸೂಕ್ತವಾದ ತರಬೇತಿಗೆ ಅವಕಾಶ ಕಲ್ಪಿಸಬೇಕು. ಫೆಡರಲ್ ಹಣಕಾಸು ವ್ಯವಸ್ಥೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂಘರ್ಷಕ್ಕೆ ಪ್ರತಿಯಾಗಿ ಸಹಕಾರ / ಸಮನ್ವಯಕ್ಕೆ ಅತ್ಯಧಿಕ ಆದ್ಯತೆ ಕೊಡುವದರಿಂದ ಅಭಿವೃದ್ಧಿಪರ ಆಡಳಿತೆಯನ್ನು ಸಾಧಿಸಲು ಸಾಧ್ಯವಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕರ್ನಾಟಕದಲ್ಲಿ 2006ರ ಫೆಬ್ರವರಿಯಿಂದ ಜಾರಿಯಲ್ಲಿದೆ. ಪ್ರಥಮ ಹಂತದಲ್ಲಿ; ಬೀದರ್, ಗುಲ್ಬರ್ಗಾ, ರಾಯಚೂರು, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾರ್ಯಾಚರಣೆಗೆ ಬಂದಿದೆ. ದ್ವಿತೀಯ ಹಂತದಲ್ಲಿ, ಬಳ್ಳಾರಿ, ಬೆಳಗಾವಿ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಕೊಡಗು ಜಿಲ್ಲೆಗಳಲ್ಲಿ 2007ರ ಏಪ್ರಿಲ್‌ನಿಂದ ಉಳಿದ ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಉದ್ಯೋಗದ ಬಗೆಗಿನ ಕಾರ್ಯಕ್ರಮಗಳು ಕಳೆದ 30 ವರ್ಷಗಳಿಂದಲೂ ಅಸ್ತಿತ್ವದಲ್ಲಿವೆ. 'ಕೂಲಿಗಾಗಿ ಕಾಳು' ಅರ್ಧದಶಲಕ್ಷ ಉದ್ಯೋಗಗಳು ಇತ್ಯಾದಿ ಕಾರ್ಯಕ್ರಮಗಳನ್ನು ಉಲ್ಲೇಖಿಸಬಹುದಾಗಿದೆ. ಕೇಂದ್ರ ಸರ್ಕಾರ ಇಂತಹ ಉದ್ಯೋಗ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಕಾಲದಲ್ಲಿನ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ನೂತನ ಯುಗದ ಆರಂಭವಾಗಿದೆ. ಕರ್ನಾಟಕದ ಕೆಲವು ಹಿಂದುಳಿದ ಜಿಲ್ಲೆಗಳಲ್ಲಿ [ಕೊಪ್ಪಳ, ಚಾಮರಾಜನಗರ, ಉತ್ತರ ಕರ್ನಾಟಕದ ಜಿಲ್ಲೆಗಳು] ಅಂಚೆ ಕಚೇರಿ ಬ್ಯಾಂಕುಗಳ ಮೂಲಕ ಕೆಲಸಗಾರರಿಗೆ ವೇತನ ಸಂದಾಯ ಮಾಡುವ ಕ್ರಮವನ್ನು ಅನುಸರಿಸಲಾಗಿದೆ.ಅದರಿಂದ ಮಧ್ಯವರ್ತಿಗಳು / ದಲ್ಲಾಳಿಗಳ ತೊಂದರೆ ಇಲ್ಲದೆ ಹಣವನ್ನು ಫಲಾನುಭವಿಗಳಿಗೆ ತಲುಪಿಸಲು ಸಾಧ್ಯವಾಗುತ್ತದೆ.

ನಿಗದಿ ಪಡಿಸಿದ ಕೂಲಿಯು ಅತಿ ಕಡಿಮೆ ಎಂಬ ಸಂಗತಿ ತಿಳಿದಾಗ ರಾಜ್ಯದ ಹಲವಾರು ಸ್ವಯಂ ಸೇವಾ ಸಂಘಟನೆಗಳು ಅಸಮಾಧಾನ ವ್ಯಕ್ತಪಡಿಸಿವೆ. ಉತ್ತರ ಕರ್ನಾಟಕದ ಜಿಲ್ಲೆಗಳ ಕೂಲಿಕಾರರಿಗೆ ಕರಾವಳಿ ಜಿಲ್ಲೆಗಳಲ್ಲಿ ನಿಗದಿಮಾಡಿದ ವೇತನದ ಮಾಹಿತಿ ಲಭ್ಯವಾಗಿರುವದರಿಂದ, ಅವರು ಹೆಚ್ಚಿನ ಕೂಲಿಯ ಆಸೆಯಿಂದ ಪ್ರೇರಿತರಾಗಿ ಕಾರವಾರ, ಮಂಗಳೂರು ಇತ್ಯಾದಿ ಕರಾವಳಿ ಜಿಲ್ಲೆಗಳಿಗೆ ವಲಸೆ ಹೋಗುತ್ತಾರೆ, ನೆರೆಹೊರೆಯ ರಾಜ್ಯಗಳಲ್ಲಿ 125 ರೂ.ಗಳಷ್ಟು ದಿನಗೂಲಿ ದೊರಕುವದರಿಂದ ಉತ್ತರ ಕರ್ನಾಟಕದ ಕೂಲಿಕಾರರು ಕೇರಳ, ಗೋವಾ, ಆಂಧ್ರ, ಮಹಾರಾಷ್ಟ್ರ ಇತ್ಯಾದಿ ರಾಜ್ಯಗಳಿಗೆ ನಿರಂತರವಾಗಿ ವಲಸೆ ಹೋಗುತ್ತಾರೆ.

ರಾಜ್ಯದ ಅನೇಕ ಪಂಚಾಯತಿಗಳಲ್ಲಿ ಸಿಬ್ಬಂದಿ ಕೊರತೆ ಇದೆ. ಖಾಲಿ ಹುದ್ದೆಗಳನ್ನು ಶೀಘ್ರಗತಿಯಲ್ಲಿ ತುಂಬದಿದ್ದರೆ ಈ ಯೋಜನೆಯ ಅನುಷ್ಠಾನದಲ್ಲಿ ಆತಂಕ ಉಂಟಾಗುತ್ತದೆ.

## ಎಮ್.ಜಿ.ಎನ್.ಆರ್.ಇ.ಜಿ.ಎಸ್. ಅಧ್ಯಯನ ಮತ್ತು ಸಮೀಕ್ಷೆ (MGNREGS : Study & Survey)

ಇತ್ತೀಚೆಗಿನ ವರ್ಷಗಳಲ್ಲಿ, ಉದ್ಯೋಗ ಕಾರ್ಯಕ್ರಮದ ಬಗೆಗಿನ ಅಧ್ಯಯನ ಮತ್ತು ಸಮೀಕ್ಷೆಗಳು ವಿಶಿಷ್ಟವಾದ ಪ್ರಾಮುಖ್ಯತೆಯನ್ನು ಹೊಂದಿವೆ. ರಾಷ್ಟ್ರದ ಅನೇಕ ಪ್ರಜ್ಞಾವಂತ ನಾಗರಿಕರು, ವಿಷಯ ತಜ್ಞರು ಹಾಗೂ ಪ್ರಬುದ್ಧ ಸಾಮಾಜಿಕ ಕಾರ್ಯಕರ್ತರು ನಿಷ್ಪಕ್ಷವಾದ ಅಧ್ಯಯನ ನಡೆಸಲು ಪ್ರೇರಣೆ ನೀಡಿದ್ದಾರೆ. 2006–07 ರಿಂದ 2012–13ರವರೆಗೆ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿರುವ ಉದ್ಯೋಗ ಕಾರ್ಯಕ್ರಮಗಳನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗಿದ್ದರೂ ಸಹ ವ್ಯವಸ್ಥಿತವಾದ ಪಾರದರ್ಶಕ ವಿಶ್ಲೇಷಣೆ ಹಾಗೂ ಅರ್ಥವಿವರಣೆಯನ್ನು ನಿರ್ಲಕ್ಷಿಸಿರುವಂತೆ ಕಾಣುತ್ತದೆ.

ಪಂಚಾಯತಿ ಚುನಾವಣೆಗಳು ಸಕಾಲದಲ್ಲಿ ನಡೆಯದಿರುವದರಿಂದ ಈ ಯೋಜನೆಯ ಅನುಷ್ಠಾನದಲ್ಲಿ ಸಾಕಷ್ಟು ತೊಂದರೆ ಉಂಟಾಗಿದೆ. ಇಂತಹ ಹಲವಾರು ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿ, ಶ್ರಮ ಜೀವಿಗಳು ತಮ್ಮ "ಉದ್ಯೋಗದ ಹಕ್ಕನ್ನು" ಸಮರ್ಥಿಸಲು ಮತ್ತು ಸ್ಥಾಪಿಸಲು ಸನ್ನದ್ದರಾಗಬೇಕು.

ಯಶೋಗಾಥೆ

# ಉದ್ಯೋಗ ಖಾತರಿ ಯೋಜನೆ ಮತ್ತು ಗ್ರಾಮೀಣ ಸ್ವಯಂ ಸೇವಕರು

**ಉಮೇಶ ಹುಲಿಕುಂಟೆ**

ಗ್ರಾಮದ ಅಭಿವೃದ್ಧಿ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ ಯುವಕ ಯುವತಿಯರನ್ನು ಯೋಜನೆಯ ಅನುಷ್ಠಾನಕ್ಕೆ ಬಳಸಲು ನಿರ್ಧರಿಸಿದಾಗ ಹೊರ ಬಂದಿದ್ದು ಈ "ಗ್ರಾಮೀಣ ಸ್ವಯಂ ಸೇವಕ" ರ ಪರಿಕಲ್ಪನೆ.

ವಿಜ್ಞಾನಿಗಳು ಅನ್ಯ ಗ್ರಹಗಳಲ್ಲಿ ನೀರಿನ ಸೆಲೆಯ ಇರುವಿಕೆಗಾಗಿ ಶೋಧನೆ ನಡೆಸುತ್ತಿದ್ದಾರೆ. ಏಕೆಂದರೆ ಜೀವಿಗಳ ಇರುವಿಕೆಗೆ ನೀರಿನ ಇರುವಿಕೆ ಅತ್ಯಗತ್ಯವಾಗಿದೆ, ಆದ್ದರಿಂದಲೇ ನೀರು ಜೀವ ಜಲ, ಜಲವಿದ್ದರೆ ಮಾತ್ರ ಜೀವ.

ಗ್ರಾಮೀಣ ಪ್ರದೇಶದಲ್ಲಿನ ಕೂಲಿ ಕಾರ್ಮಿಕರು ಹಾಗೂ ರೈತಾಪಿ ಜನರಿಗೆ ಸ್ಥಳೀಯವಾಗಿ ಉದ್ಯೋಗ ಒದಗಿಸಿ, ಗ್ರಾಮೀಣ ಜೀವನಾಧಾರಗಳನ್ನು ಅಭಿವೃದ್ಧಿ ಪಡಿಸಿ, ಉದ್ಯೋಗಕ್ಕಾಗಿ ಜನರು ನಗರ ಪ್ರದೇಶಗಳಿಗೆ ವಲಸೆಹೋಗದಂತೆ ತಡೆಯುವುದೇ ಕೇಂದ್ರ ಸರ್ಕಾರ ಪ್ರಾಯೋಜಿತ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೂಲ ಉದ್ದೇಶ ಆಗಿದೆ. ಈ ಕಾರ್ಯಕ್ರಮ ಜಾರಿಗೆ ಬಂದ ಪ್ರಾರಂಭದಲ್ಲಿ ಅನೇಕ ಎಡರು ತೊಡರುಗಳನ್ನು ಎದುರಿಸಿದರೂ ಸಹ ಕಾಲ ಕಾಲಕ್ಕೆ ಸರ್ಕಾರಗಳು ಕೈಗೊಂಡ ಸೂಕ್ತ ನಿರ್ಧಾರಗಳು ಉಸ್ತುವಾರಿ ಪ್ರಕ್ರಿಯೆಗಳಿಂದಾಗಿ ಸಧ್ಯಕ್ಕೆ ಎಲ್ಲವೂ ಒಂದು ಹಂತಕ್ಕೆ ಬಂದು ನಿಂತಿವೆ.

ಇದು ಒಂದು ಕಾಯ್ದೆಯಾಗಿದ್ದರೂ ಸಹ ಜನರಿಂದ ಬರುತ್ತಿರುವ ಕೆಲಸದ ಬೇಡಿಕೆ ಆಶಾದಾಯಕವಾಗಿಲ್ಲ. ಇದಕ್ಕೆ ಕಾರಣ ಸಮಯಕ್ಕೆ ದೊರೆಯದ ಕೂಲಿ ಹಣ. ಕೂಲಿ ಹಣ ಪಾವತಿ ಮಾಡುವ ದಿಸೆಯಲ್ಲಿ ಇನ್ನೂ ಸುಧಾರಣೆ ಆಗಬೇಕಿದೆ.

ಯೋಜನೆಯ ಪ್ರಕಾರ ಅನುದಾನದ ಅನುಪಾತವು ನೆಲ,ಜಲ ಸಂರಕ್ಷಣೆಗೆ ಶೇ.70 ಭಾಗ ಅರಣ್ಯೀಕರಣಕ್ಕೆ ಶೇ.20 ಭಾಗ, ಸರ್ವಕಾಲಿಕ ರಸ್ತೆ ಗಳಿಗೆ ಶೇ.10 ಭಾಗದಂತೆ ಬಳಕೆ ಮಾಡಿಕೊಳ್ಳಬೇಕಾಗಿದೆ. ಈ ಯೋಜನೆಯ ಅನುಷ್ಠಾನದಲ್ಲಿನ ಗೊಂದಲಗಳನ್ನು ಗಮನಿಸಿದಾಗ ಅಧಿನಿಯಮದ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿರುವ "ಕಾಯಕ ಬಂಧು" (ಮೇಟ್ಸ್) ಗಳ ಸೇವೆಯ ಬಳಕೆಗೆ ಸ್ಥಳೀಯ ಸರ್ಕಾರ ಹೆಚ್ಚು ಒತ್ತು ನೀಡಬೇಕಾಗಿದೆ.



ಸಂಸ್ಥಾಪಕರು, ಜೆಮ್ ಇಂಡಿಯಾ ಸಂಸ್ಥೆ
ನಂ. 5, ಕಲಾಭಾರತಿ, 4ನೇ ಕ್ರಾಸ್, ಎಂ.ಜಿ.ರಸ್ತೆ, ತುಮಕೂರು–572 101

ಈ ಹಿನ್ನೆಲೆಯಲ್ಲಿ ತಾನು ಹುಟ್ಟಿದ ಊರಿಗೆ, ನೆಲಜಲ ಸಂಸ್ಕೃತಿಗೆ ಒಟ್ಟಾರೆ ತನ್ನ ನಾಡಿಗೆ ಏನಾದರೂ ಋಣ ತೀರಿಸುವ ಕಾರ್ಯ ಮಾಡಬೇಕೆಂದು ಸಾಲುಮರದ ತಿಮ್ಮಕ್ಕನಂತಹ ಅನೇಕ ಜನ ಹಂಬಲಿಸುತ್ತಿರುತ್ತಾರೆ. ಅಂತಹವರ ಮನದಾಳದ ತುಡಿತವನ್ನು ಕಿಡಿಯಾಗಿಸಿದರೆ ಸಮಾಜಕ್ಕೆ ಅಪಾರವಾದ ಕೊಡುಗೆ ದೊರೆಯುತ್ತದೆ ಎಂಬುದಕ್ಕೆ ಜೀವಂತವಾದ ಉದಾಹರಣೆ ಫೌಂಡೇಶನ್ ಪಾರ್ ಇಕಲಾಜಿಕಲ್ ಸೆಕ್ಯೂರಿಟಿ ಸಂಸ್ಥೆ ರೂಪಿಸಿದ "ಗ್ರಾಮೀಣ ಸ್ವಯಂ ಸೇವಕ" ರ ಪರಿಕಲ್ಪನೆ ಮತ್ತು ಅದರ ಸಾಧನೆ ಇಲ್ಲಿದೆ.

ಫೌಂಡೇಶನ್ ಪಾರ್ ಇಕಲಾಜಿಕಲ್ ಸೆಕ್ಯೂರಿಟಿ ಸಂಸ್ಥೆ, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಲ್ಲಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಶಿಡ್ಲಘಟ್ಟ ಹಾಗೂ ಮತ್ತು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕುಗಳ 15 ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಅಲ್ಲಿನ ಗ್ರಾಮ ಪಂಚಾಯ್ತಿಗಳೊಂದಿಗೆ ಸೇರಿ ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

ಸಂಸ್ಥೆಯ ಈ ಕಾರ್ಯಕ್ಕೆ ಅವಕಾಶವಾಗಿ ಬಂದಿದ್ದು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ. ಆದರೆ ಯೋಜನೆಯ ಅನುಷ್ಠಾನದಲ್ಲಿದ್ದ ನ್ಯೂನತೆಗಳಿಂದಾಗಿ ಯೋಜನೆ ಯಶಸ್ವಿಯಾಗಿ ಜಾರಿಯಾಗದೇ ಹೋದಾಗ ಸಂಸ್ಥೆಯು ಸ್ಥಳೀಯವಾಗಿ ತಮ್ಮ ಗ್ರಾಮದ ಅಭಿವೃದ್ಧಿ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ ಯುವಕ ಯುವತಿಯರನ್ನು ಯೋಜನೆಯ ಅನುಷ್ಠಾನಕ್ಕೆ ಬಳಸಲು ನಿರ್ಧರಿಸಿದಾಗ ಹೊರ ಬಂದಿದ್ದು ಈ "ಗ್ರಾಮೀಣ ಸ್ವಯಂ ಸೇವಕ" ರ ಪರಿಕಲ್ಪನೆ.

ಸಂಸ್ಥೆಯವರು "ಗ್ರಾಮೀಣ ಸ್ವಯಂಸೇವಕ" ರನ್ನು ವಾರ್ಡ್ ಸಭೆಗಳ ಮೂಲಕ ಆರಿಸಿ, ಅವರಿಗೆ 6 ತಿಂಗಳ ಅವಧಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ, ಜನ ಯೋಜನೆಗಳು, ಸ್ಥಳೀಯ ಸ್ಥಾನಿಕ ಸಮಿತಿಗಳು, ಮಾಹಿತಿ ಹಕ್ಕಿನ ಕಾಯ್ದೆ ಇತ್ಯಾದಿ ವಿಷಯಗಳನ್ನು ಕುರಿತು ತರಬೇತಿಗಳನ್ನು ನೀಡಿದೆಯಲ್ಲದೆ ಅವರುಗಳಿಗೆ ಅಧ್ಯಯನ ಪ್ರವಾಸಗಳನ್ನೂ ಸಹ ಏರ್ಪಡಿಸಿದೆ.

ಇಂತಹ ತರಬೇತಿ ಪಡೆದ ನಂತರ "ಗ್ರಾಮೀಣ ಸ್ವಯಂಸೇವಕ"ರು ಯಾವುದೇ ಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥವಾಗಿ ತನ್ನ ಗ್ರಾಮ ಮತ್ತು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ರಮಗಳ ಯೋಜನೆ ತಯಾರಿಕೆ, ಗ್ರಾಮ ಸಭೆಗಳಲ್ಲಿ ಬಾಗವಹಿಸುವಿಕೆ, ಕೆಲಸಕ್ಕಾಗಿ ಬೇಡಿಕೆ ಸೃಷ್ಟಿ ಮಾಡುವುದು ಮತ್ತು ಯೋಜನೆ ಸಕ್ರಮ ಅನುಷ್ಠಾನಕ್ಕಾಗಿ ಶ್ರಮಿಸುತ್ತಿದ್ದಾರೆ. ಸಂಸ್ಥೆ ಕಳೆದ 3 ವರ್ಷಗಳಿಂದ ಈ ವರೆಗೆ ಇಂತಹ ಒಟ್ಟು 178 ಮಂದಿ ಪುಷರು ಹಾಗೂ ಮಹಿಳಾ "ಗ್ರಾಮೀಣ ಸ್ವಯಂಸೇವಕ"ರ ತಂಡವನ್ನು ಬೆಳೆಸಿದ್ದು, ಅವರು ತಮ್ಮಗ್ರಾಮದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಒಂದೊಂದು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಇಂತಹ 5 ರಿಂದ 15 ಗ್ರಾಮೀಣ ಸ್ವಯಂ ಸೇವಕರಿದ್ದಾರೆ.

ಈ ವರದಿ ಮಾಡಲು ನಾನು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಮತ್ತು ಶಿಡ್ಲಘಟ್ಟ ತಾಲ್ಲೂಕಿನ ಕೆಲವು "ಗ್ರಾಮೀಣ ಸ್ವಯಂಸೇವಕ"ರನ್ನು ಸಂದರ್ಶಿಸಿದಾಗ ನೆಲ, ಜಲ ಸಂರಕ್ಷಣೆ ಮೂಲಕ ಗ್ರಾಮೀಣ ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯೊಂದಿಗೆ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಆಧಾರವಾಗಿರುವ ಸಾಮೂಹಿಕ ಆಸ್ತಿಗಳಾದ ಗೋಮಾಳ, ಗುಂಡು ತೋಪು, ಕೆರೆ ಅಂಗಳ ಮುಂತಾದ ಸಾಮೂಹಿಕ ಭೂ ಪ್ರದೇಶಗಳು ಮತ್ತು ಗೋಕುಂಟೆಗಳಂತಹ ಸ್ವಾಭಾವಿಕ ಜಲಮೂಲಗಳ (ರಕ್ಷಣೆ, ಪೋಷಣೆ ಮತ್ತು ಅಭಿವೃದ್ಧಿ) ಗಾಗಿ ತಮ್ಮನ್ನೇ ಅರ್ಪಿಸಿಕೊಂಡಿರುವ ಒಬ್ಬೊಬ್ಬ ಗ್ರಾಮೀಣ ಸ್ವಯಂಸೇವಕರ ಬಾಯಲ್ಲೂ ಹಲವಾರು ಯಶೋಗಾಥೆಗಳು ಕೇಳಿಬಂದವು. ಅವುಗಳಲ್ಲಿ ಒಂದೆರಡನ್ನು ನಿಮ್ಮ ಮುಂದಿಡುತ್ತಿದ್ದೇನೆ. ಹೆಮ್ಮೆಯಿಂದ ಬೀಗುತ್ತಿದ್ದ ಗ್ರಾಮೀಣ ಸ್ವಯಂಸೇವಕರ ಮುಖದಲ್ಲಿ ಮಿಂಚುವ ಹೊಳಪು, ತಾವು ಸಾಧಿಸಿ ಪಡೆದ ಆತ್ಮ ತೃಪ್ತಿ, ಛಲ ಮತ್ತು ಹಂಬಲಗಳನ್ನು ಪ್ರತಿಫಲಿಸುತ್ತಿತ್ತು.

ಶಿಡ್ಲಘಟ್ಟ ತಾಲ್ಲೂಕಿನ ಈ.ತಿಮ್ಮಸಂದ್ರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಬೈರಗಾನಹಳ್ಳಿಯ ಗ್ರಾಮೀಣ ಸ್ವಯಂಸೇವಕರಾದ ಶ್ರೀ ಬಿ.ಸಿ.ದೇವರಾಜು ಅವರು 2008-09ರಲ್ಲಿ ತನ್ನ ಗ್ರಾಮದ ಕೂಲಿಕಾರರನ್ನು ಸಂಘಟಿಸಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಒಂದು ಗೋಕುಂಟೆ, ಒಂದು ಪೋಷಕಕಾಲುವೆ, ಶಾಲಾ ಕಾಪೌಂಡ್, ಚರಂಡಿ, ಮಾಡಿಸಿರುತ್ತಾರೆ.

ಇವರ ಸೇವಾ ಮನೋಭಾವನೆಯನ್ನು ಗುರ್ತಿಸಿ ಊರಿನ ಗ್ರಾಮಸ್ಥರು 2009ರಲ್ಲಿ ಇವರನ್ನು ತಮ್ಮ ಗ್ರಾಮ ಪಂಚಾಯ್ತಿ ಸದಸ್ಯರನ್ನಾಗಿ ಆಯ್ಕೆಮಾಡಿಕೊಂಡಿರುತ್ತಾರೆ. ಇವರು ಜನರಿಗೆ ತನ್ನೂರಿನಲ್ಲಿದ್ದ ಗೋಮಾಳ ಭೂಮಿ ಹಾಗೂ ಅದರ ಮಹತ್ವವನ್ನು ಮನದಟ್ಟು ಮಾಡಿಕೊಟ್ಟು



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇದುವರೆವಿಗೂ ಇವರು ಒಟ್ಟು 6 ಹೊಸ ಗೋಕುಂಟೆಗಳನ್ನು ನಿರ್ಮಿಸಿ 3000 ಹೊಂಗೆ ಸಸಿಗಳನ್ನು ತನ್ನ ಗ್ರಾಮದ ಸುಮಾರು 100 ಎಕರೆ ಗೋಮಾಳ ಜಮೀನಿನಲ್ಲಿ ತನ್ನ ಊರಿನ ಜನರ ಸಹಕಾರದೊಂದಿಗೆ ಬೆಳಸಿರುತ್ತಾರೆ.

ಅಲ್ಲದೆ ಒತ್ತುವರಿಯಾಗಿದ್ದ ಸುಮಾರು 3 ಎಕರೆ ಗೋಮಾಳದ ಜಮೀನನ್ನು ಜನರ ಸಹಕಾರ ದೊಂದಿಗೆ ತೆರವುಗೊಳಿಸಿ 800 ಹೊಂಗೆ ಸಸಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೆಟ್ಟಿರುತ್ತಾರೆ. ಇದೀಗ ಊರಿನ ಸಕಲ ಜಾನುವಾರುಗಳಿಗೂ ಇದೇ ಗೋಕುಂಟೆಗಳು ನೀರಿನ ಆಸರೆಯಾಗಿವೆ ಇವರಿಗೆ ಬೆಂಬಲವಾಗಿ ನಿಂತು ಇದೇ ಊರಿನ ಮತ್ತೊಬ್ಬ ಗ್ರಾಮೀಣ ಸ್ವಯಂ ಸೇವಕರಾದ ಕು.ರಾಜಮ್ಮ ಸಹಕರಿಸುತ್ತಿದ್ದಾರೆ. ಅಕ್ಕಪಕ್ಕದ ಗ್ರಾಮಸ್ಥರೆಲ್ಲ ಇವರ ಒಳ್ಳೆಯ ಸಾರ್ಥಕ ಕೆಲಸವನ್ನು ಮೆಚ್ಚಿಕೊಳ್ಳುತ್ತಾರೆ. ನನಗೆ ಇಷ್ಟು ಸಾಕು ಎನ್ನುವ ಶ್ರೀ.ದೇವರಾಜು ಮತ್ತು ಕು.ರಾಜಮ್ಮ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಬಳಸಿಕೊಂಡು ತಮ್ಮ ಗ್ರಾಮದ ಪಕ್ಕದಲ್ಲೇ ಹರಿಯುವ ಪಾಪಾಗ್ನಿ ನದಿಯ ಪುನರುಜ್ಜೀನವನಕ್ಕಾಗಿ ಅವಿರಥವಾಗಿ ಶ್ರಮಿಸುತ್ತಿದ್ದಾರೆ.

ಇನ್ನು ಬಾಗೇಪಲ್ಲಿ ತಾಲ್ಲೂಕಿನ ಮಾರ್ಗಾನುಕುಂಟೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮಾರ್ಗಾನುಕುಂಟೆ ಗ್ರಾಮದ ಗ್ರಾಮೀಣ ಸ್ವಯಂಸೇವಕರಾದ ಶ್ರೀ.ಸುಭಾನ್‌ಸಾಬ್ ಹಾಗೂ ಶ್ರೀ.ವೆಂಕಟರಾಮಪ್ಪ ಇವರು ತಮ್ಮ ಗ್ರಾಮದ ಕೂಲಿಕಾರನ್ನು ಸಂಘಟಿಸಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಪ್ರಮುಖವಾಗಿ ನೆಲಜಲ ಸಂರಕ್ಷಣೆಯ ನಿಟ್ಟಿನಲ್ಲಿ ಬೆಟ್ಟದ ತಪ್ಪಲಿನ ನೀರಿನ ಶೇಕರಣೆಗಾಗಿ ಜನರನ್ನು ಸಂಘಟಿಸಿ ಕಾಲುವೆ ಮತ್ತು ತಡೆ ಅಣೆಗಳನ್ನು ಮತ್ತು ಒಣಿರಸ್ತೆ, ಅಲ್ಲದೆ ಚರಂಡಿಗಳನ್ನೂ ಸಹ ನಿರ್ಮಿಸಿದ್ದಾರೆ. ಕಳೆದ ವರ್ಷದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅವಕಾಶಗಳನ್ನು ಬಳಸಿಕೊಂಡು ಹೊಸದಾಗಿ ಒಂದು ಗೋಕುಂಟೆ ನಿರ್ಮಿಸಿರುವುದಲ್ಲದೆ, ಒತ್ತುವರಿಯಾಗಿದ್ದ ಕೆರೆ ಕೋಡಿಗಳನ್ನು ತೆರವುಗೊಳಿಸಿ ಅಭಿವೃದ್ಧಿ ಪಡಿಸಿದ್ದಾರೆ.

ಅಲ್ಲದೆ ಕೆರೆಯ ಅಂಗಳದಲ್ಲಿ ಹೊಂಗೆ ಸಸಿಗಳನ್ನು ಬೆಳೆಸಿರುತ್ತಾರೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕಾರ್ಯಕ್ರಮದ ಬಗಕಾರ್ಮಿಕರಲ್ಲಿ ಅರಿವು ಮೂಡಿಸಿ ಉದ್ಯೋಗಕ್ಕಾಗಿ ಗ್ರಾಮ ಪಂಚಾಯ್ತಿಗೆ ಬೇಡಿಕೆ ಸಲ್ಲಿಸುವುದು, ಗ್ರಾಮ ಪಂಚಾಯ್ತಿಯ ವಿಳಂಬ ನೀತಿಯನ್ನು ವಿರೋಧಿಸಿ ನಿರೋದ್ಯೋಗ ಭತ್ಯೆಗಾಗಿ ಒತ್ತಾಯಿಸುವುದು. ನಮೂನೆ–8ನ್ನು ಗ್ರಾಮ ಪಂಚಾಯ್ತಿಯಿಂದ ಕೇಳಿ ಪಡೆಯುವುದು, ಮುಂತಾಗಿ ಕಾರ್ಮಿಕರ ಹಕ್ಕುಗಳಿಗೂ ಒತ್ತು ನೀಡಿದ್ದಾರೆ. ಆದರೆ 2009–10 ರಲ್ಲಿ ತಾವು ಜನರೊಂದಿಗೆ ಸೇರಿ ಗ್ರಾಮಕ್ಕಾಗಿ ಮಾಡಿದ ಉತ್ತಮ ಗುಣಮಟ್ಟ ಕಾಮಗಾರಿಗೆ ಇದುವರೆವಿಗೂ ಕೂಲಿ ಹಣ ಪಾವತಿ ಆಗಿಲ್ಲದಿರುವುದಕ್ಕೆ ಮನನೊಂದು ಓಂಬುಡ್ಸ್‌ಮನ್ ರವರಲ್ಲಿ ನ್ಯಾಯ ಕೂಡಾ ಕೇಳಿರುತ್ತಾರೆ.

ಫೌಂಡೇಶನ್ ಪಾರ್ ಇಕಲಾಜಿಕಲ್ ಸೆಕ್ಯೂರಿಟಿ ಸಂಸ್ಥೆ, ನೆರವಿನಿಂದ 25 ಎಕರೆ ವಿಸ್ತೀರ್ಣದ ಗೋಮಾಳದಲ್ಲಿ 2500 ವಿವಿಧ ಬಗೆಯ ಆಲ, ಜಂಬು ನೇರಳೆ, ಹೊಂಗೆ, ಚಿಗರೆ, ಫಲವರೇಣಿ ಸಸಿಗಳನ್ನು ಬೆಳೆಸಿರುತ್ತಾರೆ.

ಬಾಗೇಪಲ್ಲಿ ತಾಲ್ಲೂಕಿನ ತೋಳ್ಳಪಲ್ಲಿ ಗ್ರಾಮ ಪಂಚಾಯ್ತಿಯ ತೋಳ್ಳಪಲ್ಲಿ ಗ್ರಾಮದ ಗ್ರಾಮೀಣ ಸ್ವಯಂಸೇವಕ ಶ್ರೀಎಲ್.ವೆಂಕಟೇಶ್ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 2 ಗೋಕುಂಟೆ, 4 ಕಟ್ಟುಕಾಲುವೆ, 2 ಚೆಕ್‌ಡ್ಯಾಂಗಳು ಹಾಗೂ 300 ಮೀ.ಕೃಷಿ ಬದುವನ್ನು ಹಾಕಿಸಿರುವುದಲ್ಲದೆ, ಶ್ರಮದಾನ ಹಾಗೂ ದಾನಿಗಳ ನೆರವಿನಿಂದ ಊರಿನಲ್ಲಿ ಒಂದು ಅಶ್ವಥಕಟ್ಟೆ ನಿರ್ಮಿಸಿರುತ್ತಾರೆ. 2012–13ನೇ ಸಾಲಿನಲ್ಲಿ ಇವರು ತಮ್ಮ ಗ್ರಾಮಕ್ಕಾಗಿ ಸಂಗ್ರಹಿಸಿದ ನಿಧಿ ಸುಮಾರು 17 ಲಕ್ಷ ರೂಪಾಯಿಗಳು.

ಬಾಗೇಪಲ್ಲಿ ತಾಲ್ಲೂಕಿನ ಮಾರ್ಗಾನುಕುಂಟೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನಾರಾಯಣಸ್ವಾಮಿ ಕೋಟೆಯ ಗ್ರಾಮೀಣ ಸ್ವಯಂಸೇವಕರಾದ ಟೈಲರ್ ವೃತ್ತಿಯ ಶ್ರೀನಿವಾಸ್ ತನ್ನ ಊರಿನ ಕೂಲಿ ಕಾರ್ಮಿಕರನ್ನು ಸಂಘಟಿಸಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 1,200ಮೀ. ಉದ್ದದ ಪೋಷಕ

ಕಾಲುವೆ, ಒಂದು ಗೋಕುಂಟೆ, 3 ಚೆಕ್‌ಡ್ಯಾಂಗಳು, 500ಮೀ ರೀವಿಟ್‌ಮೆಂಟ್ ಕಾಮಗಾರಿಗಳನ್ನು ನಿರ್ವಹಿಸಿರುತ್ತಾರೆ.

ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು, ಯರ್ರಂವಾರಿಪಲ್ಲಿ ಗ್ರಾಮ ಪಂಚಾಯ್ತಿಯ ಮುಡಿವಾರಿಪಲ್ಲಿ ಗ್ರಾಮೀಣ ಸ್ವಯಂಸೇವಕರಾದ ಶ್ರೀ.ವಿ.ಸಿ.ನರಸಿಂಹಪ್ಪ ಇವರು ತಮ್ಮ ಸುತ್ತಲಿನ ಗ್ರಾಮಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಕಾರ್ಮಿಕರಲ್ಲಿ ಅರಿವು ಮೂಡಿಸಿದ್ದಾರೆ. ವಾರ್ಡ್ ಸಭೆ, ಗ್ರಾಮಸಭೆ, ಗ್ರಾಮಪಂಚಾಯ್ತಿಗಳಿಂದ ಅನುಮೋದನೆ ಪಡೆದು ಊರಿನ ಸಮೂಹಿಕ ಆಸ್ತಿಯಾಗಿರುವ ಸುಮಾರು 3 ಎಕರೆ ವಿಸ್ತಾರದ ಗಂಗಮ್ಮ ತೋಪಿನ ಸುತ್ತಲೂ ಗುಂಡಿ ಅಗೆದು ಕತ್ತಾಳೆ ಸಸಿಗಳ ಬೇಲಿ ನಿರ್ಮಿಸಿದ್ದಾರಲ್ಲದೆ ನೇರಳೆ ಹಾಗೂ ಮದ್ದಿ ಜಾತಿಯ 200 ಸಸಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಾಟಿ ಮಾಡಿ ಗ್ರಾಮ ಪಂಚಾಯ್ತಿ ರಕ್ಷಣೆಗೆ ನೆರವು ನೀಡಲು ನಿರಾಕರಿಸಿದಾಗ ತಾವೇ ತಮ್ಮ ಕುಟುಂಬದ ಸದಸ್ಯರ ನೆರವಿನಿಂದ ಹತ್ತಿರದ ಕುಂಟೆಯಿಂದ ನೀರುತಂದು ಹಾಕಿ ಗಿಡಗಳನ್ನು ತನ್ನ ಮಕ್ಕಳಂತೆ ಸಾಕುತ್ತಿದ್ದಾರೆ.

ಅಭಿವೃದ್ಧಿಯ ಕನಸುಗಳನ್ನು ಬಿತ್ತಿ ವಿವಿಧ ಯೋಜನೆಗಳನ್ನು ಬಳಸಿಕೊಂಡು ನೆಲ, ಜಲ, ಅರಣ್ಯ, ಪಶುಪಕ್ಷಿ ಸಂಪತ್ತುಗಳ ಅಭಿವೃದ್ಧಿಯಲ್ಲಿ ಮಾನವನ ಕ್ಷೇಮ ಅಡಗಿದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟು, ಸ್ಥಳೀಯ ಸಂಪನ್ಮೂಲಗಳ ಮಿತ ಹಾಗೂ ಸದ್ಬಳಕೆ ಮೂಲಕ ಗ್ರಾಮೀಣ ಜನರ ಜೀವನಧಾರಕ್ಕೆ ಇಂಬುಕೊಟ್ಟು ಕರ್ನಾಟಕದ ನಂದಿಬೆಟ್ಟದ ಹಿಂದಿನ ಕಳವಾರ ಬೆಟ್ಟದಲ್ಲಿ ಹುಟ್ಟಿ ಆಂದ್ರ ಪ್ರದೇಶದಲ್ಲಿ ಪೆನ್ನಾರ್ ನದಿಯನ್ನು ಸೇರುವ ಪಾಪಾಗ್ನಿ ನದಿಯ ಪುನರುಜ್ಜೀವನಕ್ಕೆ ಶ್ರಮಿಸುತ್ತಿರುವ ಫೌಂಡೇಶನ್ ಪಾರ್ ಇಕಲಾಜಿಕಲ್ ಸೆಕ್ಯೂರಿಟಿ ಸಂಸ್ಥೆ, ಈ ಗ್ರಾಮೀಣ ಸ್ವಯಂಸೇವಕರುಗಳಿಗೆ ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡುತ್ತಾ ಬಂದಿದೆ.

ಈ ಯೋಜನೆಯಲ್ಲಿ ಪ್ರಮುಖ ಆಕರ್ಷಣೆ ಮತ್ತು ಕೇಂದ್ರಬಿಂದುವಾಗಿ, ಪ್ರೇರಕವಾಗಿ ಆದರ್ಶ ಪ್ರಾಯರಾಗಿ, ಮಾರ್ಗದರ್ಶಕರಾಗಿ, ಹಿತೈಷಿಗಾಳಾಗಿ, ಸಲಹೆಗಾರರಾಗಿ, ನೀತಿ ನಿರೂಪಕರಾಗಿ, ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಸೇವೆ ಶ್ಲಾಘನೀಯವಾದ್ದು. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಜಿಲ್ಲಾ ಆಡಳಿತಗಳು ಹಾಗೂ ಜಿಲ್ಲಾ ಪಂಚಾಯತ್‌ಗಳು ಬಾಗೇಪಲ್ಲಿ, ಶಿಡ್ಲಘಟ್ಟ ಹಾಗೂ ಶ್ರೀನಿವಾಸಪುರ ತಾಲ್ಲೂಕುಗಳ 15 ಗ್ರಾಮ ಪಂಚಾಯ್ತಿಗಳು ಇವರ ಪ್ರಯತ್ನಕ್ಕೆ ನಿರಂತರ ಸಹಕರಿಸುತ್ತಾ ಬರುತ್ತಿವೆ. ಇನ್ನೂ ಹೆಚ್ಚಿನ ಸಹಕಾರ ದೊರಕಿದಲ್ಲಿ ಇನ್ನಷ್ಟು ಸಾಧನೆಗೆ ಪ್ರೇರಣೆ ದೊರೆಯುತ್ತದ್ದೆನ್ನುವುದು ಸಂಸ್ಥೆಯ ಅನಿಸಿಕೆ.

ಮಹಾತ್ಮ ಗಾಂಧೀಜಿ ಯವರ ಕನಸನ್ನು ನನಸಾಗಿಸುತ್ತಾ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಶಯವನ್ನು ಸಾಕಾರಗೊಳಿಸುತ್ತಾ..... ಬನ್ನಿ ನಾವೆಲರ್ಲೂ ಸೇರಿ ಹೊಸ ನಾಡೊಂದ ಕಟ್ಟೋಣ... ಎನ್ನುವುದು ಈ ಗ್ರಾಮೀಣ ಸ್ವಯಂ ಸೇವಕರ ಮಂತ್ರವಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಗ್ರಾಮೀಣ ಸ್ವಯಂಸೇವಕರು ಎದುರಿಸುತ್ತಿರುವ ಸವಾಲುಗಳು.

- ☒ ಸಾರ್ವಜನಿಕ ಆಸ್ತಿ ಅತಿಕ್ರಮಿಸಿದವರಿಂದ, ಗುತ್ತಿಗೆ ದಾರರಿಂದ, ಧಮಕಿ ಪ್ರಕರಣಗಳು.
- ☒ ಕೆಲವು ಗ್ರಾಮ ಪಂಚಾಯ್ತಿ ಅಧಿಕಾರಿಗಳಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಸ್ಪಷ್ಟತೆ ಮತ್ತು ನಿಷ್ಠೆ ಇಲ್ಲದಿರುವುದು.
- ☒ ಗ್ರಾಮ ಪಂಚಾಯ್ತಿ ಅಧಿಕಾರಿಗಳು ಎಸ್ಟಿಮೇಟ್ ತಯಾರಿಸಿ ತರುವಂತೆ ಕೂಲಿ ಕಾರ್ಮಿಕರಿಗೇ ಹೇಳುವುದು, ನಮೂನೆ–8ನ್ನು ನೀಡದೇ ಸತಾಯಿ ಸುವುದು, ಜನರು ತಯಾರಿಸಿದ ಯೋಜನೆಗಳಿಗೆ ಮನ್ನಣೆ ನೀಡದಿರುವುದು.
- ☒ ಎಂ,ಐ.ಎಸ್. ದಾಖಲೀಕರಣದಲ್ಲಿ ಅನಗತ್ಯ ವಿಳಂಬ ಮಾಡುವುದು.
- ☒ ಕಂಪ್ಯೂಟರ್ ಲಾಕ್ ಆಗಿದೆ, ಅಪ್ ಲೋಡಿಂಗ್ ಸಮಸ್ಯೆ, ಸ್ಟಾಫ್ ಇಲ್ಲ ಎಂಬ ಸಬೂಬುಗಳು.
- ☒ ಕೂಲಿ ಬೇಡಿಕೆ ಇದ್ದರೂ ಸ್ಪಂದಿಸದೇ ಇರುವುದು.
- ☒ ಕಾಮಗಾರಿಗಳ ಒಟ್ಟು ಮಿತಿಯನ್ನು ಹೆಚ್ಚಿಸದೇ ಇರುವುದು.
- ☒ 2009ರಲ್ಲಿ ಮಾಡಿದ ಕಾಮಗಾರಿಗಳ ಪೆಂಡಿಂಗ್‌ಬಿಲ್ಸ್ ಇತ್ಯಾರ್ಥಗೊಳಿಸದೇ ಇರುವುದು.
- ☒ ಕೂಲಿ ಹಣ ಪಾವತಿಯಲ್ಲಿ ಅನಗತ್ಯ ವಿಳಂಬ.

ಮಹಾತ್ಮ ಗಾಂಧೀಜಿ ಯವರ ಕನಸನ್ನು ನನಸಾಗಿಸುತ್ತಾ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಶಯವನ್ನು ಸಾಕಾರಗೊಳಿಸುತ್ತಾ..... ಬನ್ನಿ ನಾವೆಲರ್ಲೂ ಸೇರಿ ಹೊಸ ನಾಡೊಂದ ಕಟ್ಟೋಣ... ಎನ್ನುವುದು ಈ ಗ್ರಾಮೀಣ ಸ್ವಯಂ ಸೇವಕರ ಮಂತ್ರವಾಗಿದೆ. ಇವರಿಗೆ ನಾವೇನನ್ನು ಕೊಡದಿದ್ದರೂ ಪ್ರೀತಿ ಪ್ರೋತ್ಸಾಹದ ಮಾತುಗಳಿಂದ 'ಗಾಂಧೀ ಕನಸಿನ ಹರಿಕಾರ'ರೆಂದು ಕರೆಯಬಹುದಲ್ಲವೇ...?

# ಉದ್ಯೋಗ ಖಾತರಿ ಯೋಜನೆ-ದೊಡ್ಮನೆ ಗ್ರಾಮ ಪಂಚಾಯಿತಿ ರಸ್ತೆ ಕಾಮಗಾರಿ

ಕೆ. ಸುರೇಶ್

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ದೊಡ್ಮನೆ ಗ್ರಾಮ ಪಂಚಾಯಿತಿಯಲ್ಲಿ ಯೋಜನೆಯಡಿ ರಸ್ತೆ ಕಾಮಗಾರಿಯ ಸಚಿತ್ರ ಯಶೋಗಾಥೆ ಈ ಲೇಖನದಲ್ಲಿದೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕು ಕೇಂದ್ರದಿಂದ ಸುಮಾರು 27 ಕಿ.ಮೀ. ದೂರದಲ್ಲಿರುವ ದೊಡ್ಮನೆ ಗ್ರಾಮ ಪಂಚಾಯಿತಿಯು ನಿತ್ಯಹರಿದ್ವರ್ಣ ಕಾಡುಗಳಿಂದ ಆವರ್ತವಾಗಿದ್ದು, ಕುಮಟಾ-ಸಿದ್ದಾಪುರ ಮಾರ್ಗದಲ್ಲಿರುವ ಇದು ಮಲೆನಾಡಿನ ಹೆಬ್ಬಾಗಿಲಾಗಿದ್ದು, ಸ್ಥಳೀಯವಾಗಿ ಬುರುಡೆ ಜೋಗವೆಂದು ಪ್ರಸಿದ್ಧವಾಗಿರುವ ಒಂದು ಸುಂದರ ಜಲಪಾತವನ್ನು ಒಳಗೊಂಡಿರುತ್ತದೆ.

ದೊಡ್ಮನೆ ಎಂಬ ಊರ ಹೆಸರಿಗೂ ಈ ಊರಿನ "ಭವಂತೀ" ಮನೆಗೂ ಅವಿನಾಭಾವ ಸಂಬಂಧವಿದೆ, ಹಿಂದಿನ ಬಿಳಗಿ ಸಂಸ್ಥಾನದಲ್ಲಿಯ ಭವಂತೀ ಮನೆಯು ದೊಡ್ಡ ಮನೆಯಾಗಿತ್ತು. ಅದು 40 ಅಂಕಣಗಳ ಮನೆಯಾಗಿತ್ತು. ಆದ್ದರಿಂದಲೇ ದೊಡ್ಡದಾದ ಮನೆಯನ್ನು ಹೊಂದಿದ ಈ ಊರಿಗೆ ದೊಡ್ಮನೆಯೆಂದು ಕರೆಯಲಾಗಿತ್ತು.

ದೊಡ್ಮನೆ ಗ್ರಾಮಕ್ಕೂ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೂ ಹತ್ತಿರದ ಸಂಬಂಧವಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಈ ಗ್ರಾಮದ ಅನೇಕ ಗಣ್ಯರು ಭಾಗವಹಿಸಿರುತ್ತಾರೆ. ರಾಜ್ಯದಲ್ಲಿ "ಪಂಚಾಯತ್ ರಾಜ್" ವ್ಯವಸ್ಥೆಯನ್ನು 1963 ರಲ್ಲಿ ಮೊದಲ ಬಾರಿಗೆ ಜಾರಿಗೆ ತಂದ ಖ್ಯಾತಿಯನ್ನು ಪಡೆದಿರುವ ಮಾಜಿ ಮುಖ್ಯಮಂತ್ರಿ ದಿ॥ ರಾಮಕೃಷ್ಣ ಹೆಗಡೆಯವರು ಇದೇ ಗ್ರಾಮಕ್ಕೆ ಸೇರಿದವರಾಗಿರುತ್ತಾರೆ. ದೊಡ್ಮನೆ ಗ್ರಾಮ ಪಂಚಾಯಿತಿಯು ಹಲವಾರು ಪ್ರವಾಸಿ ತಾಣಗಳನ್ನು ಹೊಂದಿದ್ದು ಅವುಗಳಲ್ಲಿ ಪ್ರಮುಖವಾಗಿ ಅಘನಾಶಿನಿ ಕೊಳ್ಳ, ಫಾರೆಸ್ಟ ಗೆಸ್ಟ ಹೌಸ್, ನೆಟ್ಟಗೋಡ ಫಾಲ್ಸ್.



ಸಹಾಯಕ ನಿರ್ದೇಶಕರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಅನುಷ್ಠಾನಗೊಳಿಸಿದ ಕಾಮಗಾರಿ:

ದುಡಿಯುವ ಕೈಗಳಿಗೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ಒದಗಿಸಿ ಕೊಡಬೇಕೆಂಬ ಕೇಂದ್ರ ಸರಕಾರದ ಯೋಜನೆಯಾದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ತಾಲೂಕಿನ ಎಲ್ಲಾ ಗ್ರಾಮ ಪಂಚಾಯತಗಳಲ್ಲಿ ಅನುಷ್ಠಾನಗೊಂಡಿದ್ದು ಈ ಪೈಕಿ ದೊಡ್ಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಸ್ವಿಗುಳಿ ಆನಗಲ್ ಕರಿಬಾಳ ರಸ್ತೆ ಕಾಮಗಾರಿಯನ್ನು ಗ್ರಾಮ ಸಭೆಯ ಅನುಮೋದನೆಯೊಂದಿಗೆ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು ಅನುಷ್ಠಾನಗೊಳಿಸಲಾಯಿತು.



## ಕಾಮಗಾರಿಯ ಸಂಕ್ಷಿಪ್ತ ವಿವರಗಳು:

| | | |
|---|---|---|
| **ಕಾಮಗಾರಿಯ ಹೆಸರು** | : | **ಹಸ್ವಿಗುಳಿ ಆನಗಲ್ ಕರಿಬಾಳ ರಸ್ತೆ** |
| **ಅಂದಾಜು ಮೊತ್ತ** | : | **ರೂ. 30000/–** |
| **ಕೂಲಿ ಮೊತ್ತ** | : | **ರೂ. 22250/–** |
| **ಸಾಮಗ್ರಿ ಮೊತ್ತ** | : | **ರೂ. 534/–** |
| **ಸೃಜಿಸಲಾದ ಮಾನವ ದಿನಗಳು** | : | **178** |



## ಕಾಮಗಾರಿಯಿಂದ ಆದ ಪ್ರಯೋಜನ:

ಸಮೀಪದ ಗ್ರಾಮಗಳಿಗೆ ಕೂಲಿ ಕೆಲಸಕ್ಕೆ ಹೋಗಿ ದಿನ ಪೂರ್ತಿ ಕೆಲಸ ನಿರ್ವಹಿಸಿದರೂ ಸಮಾಧಾನಕರ ಕೂಲಿ ದೊರೆಯದ ದೊಡ್ಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಕೆಲವು ಕೂಲಿಕಾರರಿಗೆ ಈ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸಿ ಉತ್ತಮವಾದ ಕೂಲಿ ಹಣವನ್ನು ಪಡೆದಿರುತ್ತಾರೆ. ಈ ಕಾಮಗಾರಿಯಿಂದ ಜನರಿಗೆ, ಜಾನುವಾರುಗಳಿಗೆ ಮತ್ತು ವಾಹನ ಸಂಚಾರಕ್ಕೆ ತುಂಬಾ ಅನುಕೂಲಕರವಾಗಿದೆ.

ವಲಸೆ ಹೋಗುವವರನ್ನು ತಪ್ಪಿಸಲು ಮಾತ್ರವಲ್ಲದೇ ಹೊನ್ನಗೋಡ ಬಗ್ಗಿನಮನೆ ಊರಿನ ಜನರಿಗೆ ನಿರ್ಮಾಣವಾಗಿರುವ ಈ ರಸ್ತೆಯ ಬಗ್ಗೆ ಊರ ಹಿರಿಯರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಅತಂತ್ರ ಸ್ಥಿತಿಯಲ್ಲಿದ್ದವರಿಗೆ ಆಶ್ರಯದಾತವಾದ ಈ ಯೋಜನೆ ಶಾಶ್ವತವಾಗಿ ಇರಲಿ, ಇನ್ನೂ ನಮ್ಮಂತ ಕೋಟ್ಯಾನುಕೋಟಿ ಬಡವರನ್ನು ಉದ್ಧರಿಸಲಿ, ಬಡವರಿಗಾಗಿಯೇ ಬಂದಂತ ಈ ಯೋಜನೆ ಯಶಸ್ಸು ಉತ್ತುಂಗಕ್ಕೇರಲಿ ಎಂಬ ಹಿರಿಯರ ಮನದಾಳದ ಮಾತನ್ನು ನಾವಿಲ್ಲಿ ಸ್ಮರಿಸಬಹುದಾಗಿದೆ. ದುಡಿದ ಜನರಿಗೆ ಜೀವನಕ್ಕೆ ಆರ್ಥಿಕ ಸುಧಾರಣೆ ತಂದಿರುವ ಈ ಕಾಮಗಾರಿಯಿಂದ ಬಹಳ ಜನರಿಗೆ ಉಪಯುಕ್ತವಾಗಿದೆ ಎಂಬುದು ಇಲ್ಲಿನ ಜನರ ಅಭಿಪ್ರಾಯವಾಗಿದೆ.

ಯಶೋಗಾಥೆ

# ನಾಡುಮಾಸ್ಕೇರಿ ಗ್ರಾಮಪಂಚಾಯತಿಯ ಜಮೀನು ಅಭಿವೃದ್ದಿ ಕಾಮಗಾರಿ

**ಕೆ.ಜಿ. ನಾಗರಾಜ್**

ದುಡಿಯುವ ಕೈಗಳಿಗೆ ಕೆಲಸ* ಎಂಬ ನಾನ್ನುಡಿ ಆದರಿಸಿ ಬಂದಿರುವ ನಮ್ಮ ಈ "ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ"ಯು ಈ ನಾಡುಮಾಸ್ಕೇರಿ ಗ್ರಾಮ ಪಂಚಾಯತಕ್ಕೆ ಬಂದಿರುವುದು ಅದರಲ್ಲೂ ಪ.ಜಾತಿ ಫಲಾನುಭವಿಯವರಿಗೆ ನೆಮ್ಮದಿಯ ಬಾಳಿಗೆ ನಾಂದಿ ಹಾಡಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಮಟ ತಾಲ್ಲೂಕಿನ ನಾಡುಮಾಸ್ಕೇರಿ ಗ್ರಾಮಪಂಚಾಯತಿಯಲ್ಲಿ ಕೃಷಿ ಮುಖ್ಯ ಉದ್ಯೋಗವಾಗಿದೆ. ಭತ್ತ, ಶೇಂಗಾ, ಅಡಿಕೆ, ತೆಂಗು, ಬಾಳೆ, ಗೇರು, ಕಲ್ಲಂಗಡಿ ಹಾಗೂ ಗೆಣಸು ಇಲ್ಲಿಯ ಬೆಳೆಗಳಾಗಿವೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಲ್ಲಾ ಜನಾಂಗದವರಿದ್ದು, ಇವರ ಜೀವನ ಮಟ್ಟ ಮಧ್ಯಮವಾಗಿರುತ್ತದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ 960 ಕುಟುಂಬಗಳು ಹೆಸರನ್ನು ನೋಂದಾಯಿಸಿಕೊಂಡಿವೆ.

ನಾಡುಮಾಸ್ಕೇರಿ ಗ್ರಾಮಪಂಚಾಯತದಲ್ಲಿ ಪರಿಶಿಷ್ಟ ಜಾತಿಯ ಮನೆಗಳು ಸುಮಾರು 40–45 ರಷ್ಟಿದ್ದರೂ ಒಂದೆರಡು ಕುಟುಂಬಗಳಿಗೆ ಬಿಟ್ಟರೆ ಯಾರಿಗೂ ಸ್ವಂತ ಜಮೀನು ಇರುವುದಿಲ್ಲ. ಆದರೆ ಬೊಮ್ಮಯ್ತ ತಿಮ್ಮ ಆಗೇರ ಎಂಬ ರೈತನಿಗೆ ಜಮೀನಿದ್ದು, ಉದ್ಯೋಗ ಖಾತರಿ ಯೋಜನೆಯಿಂದ ತನ್ನ ಜಮೀನು ಅಭಿವೃದ್ಧಿ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದರು. ಅದರಂತೆ ಗ್ರಾಮ ಸಭಾ ಅನುಮೋದನೆಯೊಂದಿಗೆ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಅನುಷ್ಠಾನಗೊಳಿಸಲಾಯಿತು.

**ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಮಟ ತಾಲ್ಲೂಕಿನ ನಾಡುಮಾಸ್ಕೇರಿ ಗ್ರಾಮ ಪಂಚಾಯತಿಯಲ್ಲಿ ವಲಸೆ ಹೋಗುವವರನ್ನು ತಪ್ಪಿಸಿ, ಬರಡಾಗಿದ್ದ ಭೂಮಿ ಅಭಿವೃದ್ಧಿ ಮಾಡಿ ಸಮೃದ್ಧವಾದ ಬೆಳೆಯನ್ನು ಬೆಳೆಯಲು ಅನುಕೂಲವಾಯಿತು**



ಕಾಮಗಾರಿ ಪ್ರಾರಂಭದಲ್ಲಿದ್ದ ಭೂಮಿ

ಸಹಾಯಕ ನಿರ್ದೇಶಕರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಕಾಮಗಾರಿಯ ಸಂಕ್ಷಿಪ್ತ ವಿವರಗಳು:

| | |
|---|---|
| ಕಾಮಗಾರಿಯ ಹೆಸರು | : ಬೊಮ್ಮಯ ತಿಮ್ಮ ಆಗೇರ ಇವರ ಜಮೀನು ಅಭಿವೃದ್ದಿ ಕಾಮಗಾರಿ |
| ಅಂದಾಜು ಮೊತ್ತ | : ರೂ. 1.50 ಲಕ್ಷ |
| ವೆಚ್ಚವಾದ ಒಟ್ಟು ಮೊತ್ತ | : ರೂ. 1.05 ಲಕ್ಷ |
| ಸೃಜಿಸಲಾದ ಮಾನವ ದಿನಗಳು | : 1155 |





ಕಾಮಗಾರಿ ನಡೆಯುತ್ತಿರುವಾಗ ತೆಗೆದ ಚಿತ್ರಗಳು



## ತರಕಾರಿಗಳನ್ನು ಬೆಳೆದಿರುವ ದೃಶ್ಯ

ಈ ಭಾಗದ ಜನರು ವರ್ಷವಿಡಿ ಗೆಣಸು, ಕಲ್ಲಂಗಡಿ ತರಕಾರಿ ಈ ರೀತಿಯಾಗಿ ಒಂದಿಲ್ಲೊಂದು ಬೆಳೆಗಳನ್ನು ಬೆಳೆಯುತ್ತಾರೆ. ಇದರಿಂದಾಗಿ ಈ ಫಲಾನುಭವಿಯು ಇಲ್ಲಿ ಯಾವರೀತಿ ಬೆಳೆಗಳನ್ನು ಬೇಕಾದರೂ ಬೆಳೆಯಲು ಉಪಯೋಗವಾಗಿದೆ. ಸುಮಾರು 28 ಕುಟುಂಬಗಳಿಗೆ ಕೂಲಿ ಕೆಲಸವನ್ನು ಒದಗಿಸಿದಂತಾಗಿದೆ. ಈ ಕೆಳಗಿನ ಪೋಟೋದಲ್ಲಿ ಫಲಾನುಭವಿಯು ತರಕಾರಿಯನ್ನು ಬೆಳೆದು ಪ್ರಯೋಜನ ಪಡೆದುಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ.

ಈ ಕಾಮಗಾರಿಯನ್ನು ಅನುಷ್ಠಾನಗೊಳಿಸದ್ದರಿಂದ ವಲಸೆ ಹೋಗುವವರನ್ನು ತಪ್ಪಿಸಿ, ಬರಡಾಗಿದ್ದ ಭೂಮಿ ಅಭಿವೃದ್ಧಿ ಮಾಡಿ ಸಮೃದ್ಧವಾದ ಬೆಳೆಯನ್ನು ಬೆಳೆಯಲು ಅನುಕೂಲವಾಯಿತು. ವೈಯಕ್ತಿಕವಾಗಿ ತಾನು ಇಷ್ಟೊಂದು ಹಣ ಖರ್ಚುಮಾಡಿ ಜಮೀನು ಅಭಿವೃದ್ಧಿ ಮಾಡಿಕೊಳ್ಳಲು ತನ್ನಿಂದ ಆಗುತ್ತಿರಲಿಲ್ಲ. ನನ್ನಲ್ಲಿ ಭೂಮಿ ಇದ್ದರೂ ಪ್ರಯೋಜನ ಇಲ್ಲದಂತಾಗಿತ್ತು. ಆದರೆ ಗ್ರಾಮ ಪಂಚಾಯತದವರ ಸಹಕಾರ ಮತ್ತು ಈ ಯೋಜನೆಯ ಸಹಾಯದಿಂದ ಭೂಮಿ ಅಭಿವೃದ್ಧಿಯಾಗಿ ನಮ್ಮ ಬಡತನ ದೂರವಾಗಿ ಜನಸಾಮಾನ್ಯರಂತೆ ನಾವು ವಾಸಿಸಬಹುದಾಗಿದೆ ಎಂದು ಫಲಾನುಬವಿ ಬೊಮ್ಮಯ್ಯ ತಿಮ್ಮ ಆಗೇರ ಹೇಳಿ, ಅತಂತ್ರ ಸ್ಥಿತಿಯಲ್ಲಿದ್ದವರಿಗೆ ಆಶ್ರಯ ದಾತವಾದ ಈ ಯೋಜನೆ ಶಾಶ್ವತವಾಗಿ ಇರಲಿ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಯೋಜನೆಯಿಂದ ಇನ್ನೂ ನಮ್ಮಂತ ಕೋಟ್ಯಾನು ಕೋಟಿ ಬಡವರನ್ನು ಉದ್ಧಾರವಾಗಿಲಿ ಎಂದು ಸ್ಥಳೀಯ ಜನರು ಮನದುಂಬಿ ಹರಸಿರುವುದನ್ನು ನಾವಿಲ್ಲಿ ಸ್ಮರಿಸಬಹುದಾಗಿದೆ.

# PANCHATANTRA - Districtwise performance as on date.
## REPORT ON DISTRICT WISE GRAMA PANCHAYATH PERFORMANCE AS ON 30/04/2013 01:00:00 PM

